THE BOOK WAS DRENCHED

ಮ. ಗ್ರ. ಪ್ರ. ಸಮಿತಿಯ ಕುಸುಮಗಳು

ಕಾದಂಬರಿಗಳು.

೧.	ಸುದರ್ಶನ	ಆನಂದಕಂದ	೦-೧೨-೦
೪.	ಬಾಳುರಿ	ರಂ. ಶ್ರೀ. ಮುಗಳಿ	೦-೧೨-೦
೫.	ಬ್ರಾಹ್ಮಣರ ಹುಡುಗಿ	ಆರ್. ವ್ಯಾಸರಾವ್	೦-೧೨-೦
೬-೭	ವಿಶ್ವಾಮಿತ್ರನ ಸೃಷ್ಟಿ	ಆರ್. ವ್ಹಿ. ಜಾಗೀರದಾರ	೧-೧೨-೦
೯.	ಕಾಳರಾತ್ರಿ	ಮಧುರಚೆನ್ನ	೦-೧೨-೦
೧೦.	ಧರ್ಮಸೆರೆ	ಜಡಭರತ	೦-೧೪-೦
೧೧.	ರಾಜಯೋಗಿ	ಆನಂದಕಂದ	೦-೧೪-೦
೧೩-೧೪	ಇಜ್ಜೋಡು	ವಿ. ಕೃ. ಗೋಕಾಕ	೧-೮-೦
೧೬.	ಧೂಮಕೇತು	ಕೆ. ಶಂಕರಭಟ್ಟರು	೦-೧೪-೦

ಕತೆಗಳು.

೨	ಸ್ಫುಲಿಂಗ	ಬೇರೆ ಬೇರೆಯವರು	೦-೧೨-೦
೮.	ಜೀವನ	ಕೃಷ್ಣಕುಮಾರ	೦-೧೨-೦
೧೫.	ಕುಂಟಿಂಡು (ಸಚಿತ್ರ)	ಪರಶುರಾಮ ಅನು: ಜಲಧರ	೧-೦-೦
೧೯.	ವಿಶ್ವೇಶ್ವರನ ದಿನಚರಿ	ನಾ. ಕಸ್ತೂರಿ	೦-೧೨-೦
೨೦.	ಪುಷ್ಪಮಾಲೆ	ಶ್ರೀಸ್ವಾಮಿ	೦-೧೦-೦
೨೧.	ಸೋಲೋ ಗೆಲುವೋ	ದೇವುಡು	೦-೧೨-೦

ನಾಟಕಗಳು.

೧೨.	ಕೋಲ್ಮಿಂಚು	ಬೇರೆ ಬೇರೆಯವರು	೧- ೦-೦
೧೮.	ಸೇವಾಪ್ರದೀಪ	ರಂ. ಶ್ರೀ. ಮುಗಳಿ	೦-೧೨-೦
೨೩.	ಪಾವನ ಪಾವಕ	,, (ಅಚ್ಚಿನಲ್ಲಿ)	೦-೧೨-೦
೩.	ತಿರುಪಾಣಿ	ಶ್ರೀನಿವಾಸ	೦- ೮-೦

ಕಾವ್ಯಗಳು.

೨.	ಪಯಣ	'ವಿನಾಯಕ'	೦-೧೨-೦
೪.	ನಾದಲೀಲೆ	ಅಂಬಿಕಾತನಯದತ್ತ	ಅಚ್ಚಿನಲ್ಲಿ
೫.	ಉಯ್ಯಾಲೆ	ಅಂಬಿಕಾತನಯದತ್ತ	ಅಚ್ಚಿನಲ್ಲಿ

ವಿಚಾರ ಪ್ರಚೋದಕ ಗ್ರಂಥಗಳು.

೩.	ತ್ರಿಪುರದಹನ	ದೊರೆಸ್ವಾಮಿ ಐಯ್ಯಂಗಾರ	೦-೧೨-೦
೧೭.	ಧರ್ಮಜ್ಯೋತಿ	,,	೧- ೪-೦
	ಸಾಹಿತ್ಯ ಮತ್ತು ವಿಮರ್ಶೆ	ದ. ರಾ. ಬೇಂದ್ರೆ	೦-೧೨-೦

ಓಂ ನಲ್

ಬಿಡಿ ಮುತ್ತು ೫

ತಿರುಪಾಣಿ

'ಶ್ರೀನಿವಾಸ'

ಮನೋಹರ ಗ್ರಂಥ ಪ್ರಕಾಶನ ಸಮಿತಿ
ಧಾರವಾಡ

ಮಾರ್ಚ] [೧೯೩೭

ಪ್ರಕಾಶಕರು :
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲಾ
ಧಾರವಾಡ

ಮುದ್ರಕರು :
ಶೇಷಗಿರಿರಾವ ಕುಲಕರ್ಣಿ
ಸಾಧನ ಪ್ರೆಸ್, ಧಾರವಾಡ

ನಮ್ಮ ಮಾತು

ಕನ್ನಡದಲ್ಲಿ ಛಂದೋಬದ್ಧ ರೂಪಕಗಳು, ನೃತ್ಯಪ್ರಧಾನ ರೂಪಕಗಳು ತಲೆದೋರಿವೆ. 'ತಿರುಪಾಣಿ' ಎಂಬ ಈ ರೂಪಕವು ಗೀತಪ್ರಧಾನವಾದುದು. ಗ್ರಂಥಕರ್ತರು ಗೀತಮಯವಾಗಿ ಈ ಕೃತಿಯನ್ನು ರಚಿಸಬೇಕೆಂದು ಆಶೆಯಿಟ್ಟುಕೊಂಡಿದ್ದರೂ ಮಾತುಗಳು ಸಹಜವಾಗಿ ಇದರಲ್ಲಿ ಭಾವದ ಹೂಗಳ ಸುತ್ತಲು ಹರಹಿಕೊಂಡ ಎಲೆಗಳ ಪಸರದಂತೆ ಇದಕ್ಕೊಂದು ಪೂರ್ಣ ಸೌಂದರ್ಯವನ್ನೇ ತಂದಿವೆ. 'ಸುಬ್ಬಣ್ಣ'ನ ಜೀವಮಾನದುದ್ದಕ್ಕೂ ಅದರ ರೀತಿಯನ್ನು ನಿರೂಪಿಸಿದ ಕೈಯೆ ಇಲ್ಲಿ ತಿರುಪಾಣಿಯ ಜೀವನದ ಕೊನೆದಿನದ ಭಾವದ ಹೂಗೊಂಚಲನ್ನು ಅರಳಿಸಿದೆ. ಒಳಗೆ ಪೂರ್ಣವಾದ ಒಂದು ಜೀವವು ಪ್ರಪಂಚದ ಕಣ್ಣಿಗೂ ಲೆಕ್ಕಕ್ಕೂ ಪೂರ್ಣವಾದುದನ್ನೂ ಕೃತಾರ್ಥವಾದುದನ್ನೂ ಇಲ್ಲಿ ರೂಪಿಸಿದೆ.

ಇಂಥ ಒಂದು ಕೃತಿಯನ್ನು ಮನೋಹರ ಗ್ರಂಥ ಪ್ರಕಾಶನ ಸಮಿತಿಯು ಬಿಡಿಮುತ್ತಿನ ಸರದಲ್ಲಿ ಪವಣಿಸಲು ನಮಗೆ ಅನುಕೂಲ ಮಾಡಿಕೊಟ್ಟದ್ದಕ್ಕಾಗಿ ಕನ್ನಡ ಸಾಹಿತ್ಯವನ್ನು ಬಹುವಿಧದಲ್ಲಿ ಸಂಪನ್ನವನ್ನಾಗಿ ಮಾಡಲು ವ್ರತಬದ್ಧರಾಗಿ ನಿಂತ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರರಿಗೆ ನಾವು ಋಣಿಗಳಾಗಿದ್ದೇವೆ.

ಪ್ರಕಾಶಕರು

ಮುನ್ನುಡಿ

ವೇದಾಂತದ ಮೂರು ಮತಗಳಲ್ಲಿ ವಿಶಿಷ್ಟಾದ್ವೈತ ಒಂದು ಎಂದೂ ಅದನ್ನು ಒಂದು ಸಿದ್ಧಾಂತವಾಗಿ ಸ್ಥಾಪಿಸಿದವರು ಶ್ರೀರಾಮಾನುಜಾಚಾರ್ಯರೆಂದೂ ಎಲ್ಲರೂ ಬಲ್ಲರು. ರಾಮಾನುಜಾಚಾರ್ಯರಿಗೆ ಹಿಂದೆ ಈ ಮತವು ಜನರಲ್ಲಿ ಒಂದು ಸಂಪ್ರದಾಯವಾಗಿ ಬೆಳೆದು ಬಂದಿತ್ತು. ಸಂಪ್ರದಾಯಕ್ಕೆ ಕಾರಣಪುರುಷರಾಗಿದ್ದು ದೈವಸಾಕ್ಷಾತ್ಕಾರವನ್ನು ಮಾಡಿಕೊಂಡ ಮಹನೀಯರನ್ನು ಅವರ ಅನುಯಾಯಿಗಳು ಆಳ್ವಾರ್ ಗಳೆಂದು ಪೂಜಿಸುತ್ತಿದ್ದರು. ಆಳ್ವಾರುಗಳು ಹನ್ನೆರಡು ಮಂದಿ. ಇವರಲ್ಲಿ ಬೇರೆ ಬೇರೆ ಕುಲದ ಜನರಿದ್ದಾರೆ. ಇವರಲ್ಲಿ ಒಬ್ಬರಾದ ತಿರುಪಾಣಿ ಎನ್ನುವವರು ಅಂತ್ಯಜರಾಗಿ ಹುಟ್ಟಿದವರಂತೆ. ಬಹುವರ್ಷ ರಂಗನಾಥರಿಗೆ ಸೇವೆ ಸಲ್ಲಿಸುತ್ತಿದ್ದ ಇವರ ಮೇಲೆ ಒಂದು ದಿನ ದೇವಾಲಯದ ಚಾಕರನೊಬ್ಬನು ದಾರಿ ಬಿಡಲಿಲ್ಲವೆಂಬ ಕಾರಣದಿಂದ ಕಲ್ಲೆಸೆದನೆಂದೂ ದೇವರು ಇದನ್ನು ಸಹಿಸಲಾರದೆ ಭಕ್ತನನ್ನು ಒಳಗೆ ಕರತರಬೇಕೆಂದು ದೇವಾಲಯದ ಸರ್ವಾಧಿಕಾರಿಗೆ ಆಜ್ಞೆ ಮಾಡಿದನೆಂದೂ ಸರ್ವಾಧಿಕಾರಿ ಲೋಕಸಾರಂಗನು ಹಾಗೆ ಮಾಡಲು ತಿರುಪಾಣಿ ದೇವರ ಮೂರ್ತಿಯಲ್ಲಿ ಐಕ್ಯವಾದನೆಂದೂ ಸಂಪ್ರದಾಯದ ಇತಿಹಾಸ ಹೇಳುತ್ತದೆ. ಆ ಭಕ್ತನೆಂಥವನಿದ್ದಿರಬಹುದು ಅವನ ಆವರಣವೆಂಥದಿದ್ದಿರಬಹುದು ಎಂದು ಊಹಿಸುವುದಕ್ಕಾಗಿ ಈ ಸಣ್ಣ ದೃಶ್ಯವನ್ನು ರಚಿಸಿರುವುದಾಗಿದೆ.

ಈ ಪುಸ್ತಕವನ್ನು ಧಾರವಾಡದ ನಮ್ಮ ಗೆಳೆಯರು ಪ್ರಕಟಿಸಬೇಕೆಂದು ಅಪೇಕ್ಷಿಸಿದಾರೆ. ಇದಕ್ಕೆ ಕಾರಣರಾದ ಗೆಳೆಯ ಶ್ರೀ **ದತ್ತಾತ್ರೇಯ ಬೇಂದ್ರೆ** ಇವರಿಗೂ ಪ್ರಕಾಶಕರಾದ ಮನೋಹರ ಗ್ರಂಥಮಾಲೆಯ ಮಿತ್ರರಿಗೂ ನಾನು ಹೃತ್ಪೂರ್ವಕವಾದ ವಂದನೆಯನ್ನು ಸಲ್ಲಿಸುತ್ತೇನೆ.

ಬೆಂಗಳೂರು ಧಾತುಸಂವತ್ಸರ
ಫಾಲ್ಗುಣ ಶುದ್ಧ ಪ್ರಥಮೆ } **ಮಾಸ್ತಿ ವೆಂಕಟೇಶ ಐಯ್ಯಂಗಾರ**

ಪಾತ್ರಗಳು

ಭಕ್ತಪಾಣಿ
ಅಳಿಯ
ಭಾವ
ತಂಗಿ
ಲೋಕಸಾರಂಗ
ಆಳ್ವಾರ
ಮಧುರ
ಶಠಕೋಪ
ಕಾರೀದಾಸ
ಮಡಿಯಾಕೆ
ಹರಿದಾಸ
ಕೋಲಾಟದ ಗುರು

ಅರ್ಚಕರು, ಸುಮಂಗಲೆಯರು, ಬ್ರಾಹ್ಮಣರು, ಸೇವಕರು ಮಕ್ಕಳು.

ತಿರುಪಾಣಿ

ತಿ ರು ಪಾ ಣಿ

ಸ್ಥಾನ ೧

ಶ್ರೀರಂಗದಲ್ಲಿ ರಂಗನಾಥನ ದೇವಾಲಯದ ಮುಂಭಾಗ. ಬೀದಿಯಲ್ಲಿ ಸ್ವಲ್ಪ ದೂರದಲ್ಲಿ ಭಕ್ತ ಪಾಣಿ ಹಾಡುತ್ತ ನಿಂತಿದಾನೆ.

ಪಾಣಿ—

ಬಿಲಹರಿ

ಶ್ರೀರಂಗದಲಿ ನಮ್ಮ ಕಾವೇರಿದೇವಿಯರ
ನಳಿದೋಳ ನಡುವೆ ಸುಖದಲಿ ಪವಡಿಸಿ
ಈರೇಳು ಲೋಕವನು ನಿದ್ರೆಯರಿಯದ ಕನಸ
ಅಲೆಯೊಂದರಿಂದಲೇ ಸೃಜಿಸಿ ಸುಖಿಸಿ
ಕಾಲಚಕ್ರವ ಸುತ್ತಿ ಯುಗಯುಗಗಳನು ಹರಿಸಿ
ಸಮಯ ಬರೆ ಜಗವನುದರದಲಿ ಮರೆಸಿ
ಲೀಲೆಯಲಿ ಸಂಭ್ರಮಿಸಿ ನಗುತಿರುವ ರಂಗೇಶ
ರಮೆಯರಸ ನಿನ್ನಡಿಗೆ ಶರಣು ಶರಣು.

ಇಕ್ಷ್ವಾಕು ನಳ ನಹುಷ ಸಗರ ಕುಕ್ಷಿ ವಿಕುಕ್ಷಿ
ಅಂಬರೀಷ ದಿಲೀಪ ರಘುರಾಯರು
ಲಕ್ಷವರುಷದ ಕಾಲ ಮನವ ನಿನ್ನಲಿ ನೆಟ್ಟು
ನಂಬಿ ಮಾಡಿದ ಪೂಜೆಗೊಪ್ಪಿಕೊಂಡು
ಕೈಮುಗಿದು ಬಂದವರ ಕಾಲ ಹಿಡಿಯುತ ಕುಲದ
ಪುತ್ರನೆನಿಸುತ ಸಾಲಗಳನು ಹರಿಸಿ
ರಾಮಾಭಿಧಾನದಲಿ ಭಕ್ತನಿಗೆ ತನ್ನನೇ
ತೆತ್ತ ಸಿರಿಯರಸ ರಂಗೇಶ ಶರಣು.

ಶರಣು ಸುಂದರವೇಷ ಕಸ್ತೂರಿ ರಂಗೇಶ
ಸುಜನಕುಲ ಸಂತೋಷ ವಿಮಲಹಾಸ
ಶರಣು ಬಂದ ವಿಭೀಷಣಗೆ ಲಂಕೆ ನಿಜದಾಸ
ಮಾರುತಿಗೆ ಬ್ರಹ್ಮಪದವೆಂದ ಶ್ರೀಶಾ
ನಂಬಿ ಬಹ ಭಕ್ತರಾಶೆಯನೆಲ್ಲ ಸಲ್ಲಿಸುತ
ಶ್ರೀರಂಗದಲಿ ನಿಂತ ಶೇಷಶಾಯಿಾ
ಹಂಬಲಿಸುತಿಹೆನಯ್ಯ ಬಡಪ್ರಾಣಿ ನಾ ಪಾಣಿ
ಮಾರಮಣ ಸಲಹಯ್ಯ ಶರಣು ಶರಣು.

(ಇಬ್ಬರು ಅರ್ಚಕರು ಪ್ರವೇಶಿಸುವರು)

ಮೊದಲನೆಯವ— ಏಯ್ ದಾರೀ ಬಿಡೋ.

ಪಾಣಿ— (ನಮಸ್ಕರಿಸಿ) ಬಿಟ್ಟೆ ದೇವರೆ; ದಯಮಾಡಿ. (ಪಕ್ಕಕ್ಕೆ ಹೋಗುತ್ತಾನೆ)

ಎರಡನೆಯವ— ದಿನಾ ಈ ಹೊಲೆಯನದೊಂದು ಗೋಳು.

ಮೊದಲನೆಯವ— ಗೋಳೇನು, ಕೂಗಿದರೆ ದಾರಿ ಬಿಡುತಾನಲ್ಲ.

ಎರಡನೆಯವ— ದಾರಿ ಬಿಡುತಾನೆ ಸರಿ. ಆದರೆ ಸ್ನಾನಮಾಡಿಕೊಂಡು ಬಂದು ಇವನ್ನ ಕೂಗೋದು ಒಂದಾಯಿತಲ್ಲ.

ಮೊದಲನೆಯವ— ಮಾತಾಡಿಸಿದರೆ ತೊಂದರೆ ಇಲ್ಲ. ಅವನೂ ವೈಷ್ಣವ.

ಎರಡನೆಯವ— ಒಳ್ಳೇ ವೈಷ್ಣವ. ನಡಿ ಸಾಕು ನಿನ್ನ ಮಾತು.

(ಮುಂದಕ್ಕೆ ಹೋಗುವರು)

ಪಾಣಿ— (ಮತ್ತೆ ಮುಂದಕ್ಕೆ ಬಂದು ಹಾಡುವನು)

ಹಿಂದುಸ್ತಾನಿ ತೋಡಿ

ಬಾರೋ ರಂಗ ಬಾರೋ ಕೃಷ್ಣ
ಬಾರೋ ಸಿರಿರಮಣಾ ಮೊಗದೋರೋ ॥

ಯಾರೋ ನನ್ನನು ಪೊರೆದವರು ಉ
ದಾರ ಚರಿತಾ ನೀ ಕೈ ಬಿಡಲು
ಕಾರುಣಿಕಾ ನೀನಲ್ಲದೆ ಆ
ವಾರಣರಾಜನ ಪೊರೆದವರಾರೋ

ಘೋರ ಸಂಕಟದಲಿ ಪಾಂಡವರ
ನಾರಿ ಹಲುಬಿ ಕರೆಯೇ
ಸಾರಸಾಕ್ಷ........

(ದೂರದಲ್ಲಿ ಇಬ್ಬರು ಬರುವುದನ್ನು ಕಂಡು ದೂರಕ್ಕೆ ಸರಿಯುತ್ತಾ ಹಾಡಿಕೊಂಡೇ ಇರುವನು -- ಶಠಕೋಪ ಕಾರೀದಾಸ ಬರುವರು)

ಶಠಕೋಪ— ವೈಷ್ಣವನೆಂದ ಮೇಲೆ ವರ್ಣ ಅಷ್ಟು ಮುಖ್ಯವಲ್ಲ. ಭಾಗವತ ಧರ್ಮಕ್ಕೆ ಮೂಲಪುರುಷನೇ ಅಸುರನಲ್ಲವೇ? ಅವನು ಅಸುರರಲ್ಲಿ ಹುಟ್ಟಿದನಷ್ಟೆ; ಗುಣದಿಂದ ಭಗವದ್ಭಕ್ತರಲ್ಲಿ ಮೊದಲಿಗನಾದನು.

ಕಾರೀದಾಸ— ಅಪ್ಪಣೆ.

ಶಠಕೋಪ— ನಾನು ದ್ವಿಜ, ನೀನು ದ್ವಿಜನಲ್ಲ. ಆದರೆ ಇದು ಜಾತಿ ವ್ಯವಹಾರಕ್ಕೆ ಊಟಕ್ಕೆ ಕೊಡುತರುವುದಕ್ಕೆ ಆಗಿರುವ ಭೇದ. ಆತ್ಮವೆರಡೂ ವಿಷ್ಣುಭಕ್ತಿಯಿಂದ ಸಮಾನವಾಗಿವೆ.

ಕಾರೀದಾಸ— ಅಪ್ಪಣೆ.

ಶಠಕೋಪ— ನಮ್ಮ ಧರ್ಮವನ್ನು ಈ ಯುಗದ ಆದಿಯಲ್ಲಿ ಬೆಳಗಿದ ಶಠಕೋಪಗುರು ದ್ವಿಜರಲ್ಲವಲ್ಲ, ಆದರೆ ಆತನ ಭಕ್ತಿ ಲಕ್ಷಾಂತರ ದ್ವಿಜರನ್ನು ಆತನ ಶಿಷ್ಯರನ್ನಾಗಿ ಮಾಡಿತು.

(ದೇವಾಲಯದ ಸ್ಥಾನೀಕನೊಬ್ಬನು ಬರುವನು)

ಸ್ಥಾನೀಕ— ಯಾರಯ್ಯ ಅದು ದಾರೀಲಿ, ಹೋಗು ಒಂದು ಕಡೆಗೆ.

(ಎಂದು ಕೂಗುವನು. ಪಾಣಿ ಬೆಚ್ಚಿ ಒಂದು ಕಡೆಗೆ ನಡೆಯುವನು. ಸ್ಥಾನೀಕನು ಪಾಣಿಯನ್ನು ಬಿಟ್ಟು ಒಂದು ಕಡೆಗೆ ಹೋಗಿ ಮರೆಯಾಗುವನು.)

ಶಠಕೋಪ— (ತನ್ನನ್ನು ಏನು ಹೇಳಿದನೋ ಎಂದು) ಯಾರವರು? ಏನು ಹೇಳಿದರು?

ಕಾರೀದಾಸ— ದೇವಸ್ಥಾನದ ಸ್ಥಾನೀಕರು. ಪಾಣಿ ಅಲ್ಲಿ ನಿಂತಿದ್ದಾನೆ. ಅವನನ್ನು ದೂರ ಹೋಗು ಎಂದರು.

ಶಠಕೋಪ— ಓ, ಸರಿ.

ಕಾರೀದಾಸ— ಒಳ್ಳೇ ಭಕ್ತ ಈ ಪಾಣಿ. ಅವರ ಜನವೆಲ್ಲಾ ಮಾರಿಯನ್ನ ಅಣ್ಣನನ್ನ ಪೂಜೆ ಮಾಡುತ್ತಾರೆ. ವರ್ಷ ವರ್ಷ ಮೇಕೆ ಕೋಣನನ್ನ ಸುಮ್ಮನೆ ಬಲಿ ಕೊಡುತ್ತಾರೆ. ಇವ ಅದೆಲ್ಲಾನೂ ಬಿಟ್ಟು ಮೂವತ್ತು ವರ್ಷವಾಯಿತಂತೆ. ಇವನಿಂದ ಇವನ ಜನವೂ ಅನೇಕರು ಇದೇ ದಾರಿಗೆ ಬಂದಿದಾರೆ.

ಶಠಕೋಪ— ಒಳ್ಳೇ ಭಕ್ತ ಪಾಣಿ.

ಕಾರೀದಾಸ— ಗುರುಗಳೆ, ಪುಂಡರೀಕಾಕ್ಷನನ್ನ ಸ್ಮರಿಸಿದವನು ಒಳಗೂ ಹೊರಗೂ ಶುದ್ಧ ಎಂತ ಉಪದೇಶವಿದೆಯಲ್ಲ. ಇವನು ಯಾವಾಗಲೂ ದೇವರ ಧ್ಯಾನದಲ್ಲಿಯೇ ಇರುತ್ತಾನೆ. ಆದರೂ ಇವನ ಹತ್ತಿರಕ್ಕೆ ನಾವು ಹೋಗಬಾರದು ಎನ್ನುತ್ತೇವಲ್ಲ.

ಶಠಕೋಪ— ದೇಹಕ್ಕೆ ಏನು ಮಾಡುವುದು. ದೇಹವೆನ್ನುವುದು ಯಾವ ಪಿಂಡದಿಂದ ಬಂದರೆ ಅದರ ಗುಣ ಅದಕ್ಕೆ ಇರುತ್ತೆ. ಅಂತ್ಯಜ ಪಿಂಡ. ಸ್ನಾನಮಾಡಿದರೂ ಅಂತ್ಯಜಪಿಂಡವೇ, ಧ್ಯಾನಮಾಡಿದರೂ ಅಂತ್ಯಜಪಿಂಡವೇ.

ಕಾರೀದಾಸ— ದೇಹ ಬಿಟ್ಟರೆ ಇವನು ವೈಕುಂಠಕ್ಕೆ ಹೋಗಬಹುದು, ದೇಹ ಇರುತ್ತ ನಮ್ಮ ಹತ್ತಿರಲೂ ಬರಕೂಡದು.

ಶಠಕೋಪ— ಹೌದು, ಅದೇ ಶಿಷ್ಟಾಚಾರ.

(ಎಂದು ಮುಂದೆ ಹೋಗುವರು)

ಪಾಣಿ— (ಅವರಡಿಯ ಗುರುತನ್ನು ಮುಟ್ಟಿ ಕಣ್ಣಿಗೊತ್ತಿಕೊಂಡು--ಹಾಡುವನು.)

ಘೋರ ಸಂಕಟದಲೀ ಪಾಂಡವರ
ನಾರಿ ಹಲುಬಿ ಕರೆಯೇ
ಸಾರಸಾಕ್ಷ ನೀನಲ್ಲದೆ
ಯಾರು ಬಂದರೋ ಅವಳನು ಪೊರೆಯೇ

ಕಾಣದ ಕರ್ಮಕೆ ಸಿಲುಕಿ ನೊಂದೆನೋ
ಹೀನನೆನಿಸಿಕೊಂಡೆನೋ

ಪಾಣಿಯ ಉಸಿರನುದ್ಧರಿಸಲು ಬಲ್ಲ
ಜಾಣಾ ಕೃಪೆದೋರೋ ಪೊರೆ ಬಾರೋ ॥

(ಪಾಣಿಯ ಸೋದರಳಿಯ ಬರುವನು)

ಅಳಿಯ— ಮಾವಯ್ಯ, ಅಮ್ಮ ನಿನ್ನ ಕರಕೊಂಡು ಬಾ ಅಂದಳು.

ಪಾಣಿ— ಯಾಕಂತಂದಳು.

ಅಳಿಯ— ಗುಡಿಗೆ ಹೋಗಬೇಕಂತೆ.

ಪಾಣಿ— ಇವತ್ತು ನಾ ಬರಲಿಲ್ಲ ಅನ್ನಪ್ಪ.

ಅಳಿಯ— ಬಾ ಮಾವಯ್ಯ ಹೋಗೋಣಂತೆ.

(ಎಂದು ಕೈಹಿಡಿದು ಎಳೆಯುತ್ತಾನೆ.)

ಪಾಣಿ— ನನ್ನ ಕಾಡಬೇಡಪ್ಪಾ. ಇವತ್ತು ನಾ ಬರಲಿಲ್ಲ. ಹೋಗಿ ಅಮ್ಮನಿಗೆ ಹೇಳು. ಅದು ಹಂಗಿರಲಿ ಇತ್ತ ಬಾ, ಆ ಜಯ ಗೋವಿಂದ ಹಾಡು ಕೇಳೋವ.

ಅಳಿಯ—

ಮಧ್ಯಮಾವತಿ

ಜಯ ಗೋವಿಂದ, ಜಯ ಗೋವಿಂದ
ಜಯ ಗೋವಿಂದ ಜಯ ಗೋವಿಂದ ॥

(ಎರಡು ಚರಣ ಹಾಡಿ) ಮಾವಯ್ಯ, ಹಾಡು ಹೇಳುತಿದ್ರೆ ಕುಣಿಯೋಣ ಅನಿಸುತ್ತದೆ.

ಪಾಣಿ— ಕುಣಿ ಹಂಗಾದರೆ.

ಅಳಿಯ— (ಕುಣಿಯುತ್ತ)

ಜಯ ಸಿರಿರಂಗ ಅಸುರಕುಲಭಂಗ
ಜಯ ಮಂಗಳಾಂಗ ಕರುಣಾಪಾಂಗ ॥

ಜಯ ಮುಚುಕುಂದ ಪ್ರಿಯ ಜಯ ನಂದ
ಗೋಪನ ಕಂದ ಯಶೋದಾನಂದ ॥

ಸುಂದೋಪಸುಂದಮೋಹಕ ಜಯ ಭವ
ಬಂಧನಿವಾರಕ ಜಯ ಗೋವಿಂದ ॥

(ಪಾಣಿಯೂ ಅವನ ಜೊತೆಗೆ ಕುಣಿಯುವನು.)

ಜಯ ರಾಕ್ಷಸ ಕುಲನಾಶಕ ದೇಶಿಕ
ಶಠಕೋಪ ಹೃದಯ ಕಮಲ ವಿಕಾಸಕ ॥

ದಾಸಕುಲಜ ಪಾಣಿಯನುದ್ಧರಿಸಿ
ಆಶೆಯ ಸಲಿಸುವ ದೇವ ಮುಕುಂದ ॥

ಪಾಣಿ— (ಕುಣಿತ ಮುಗಿದ ಮೇಲೆ ಅಳಿಯನನ್ನು ತಬ್ಬಿಕೊಂಡು ಮುದ್ದಿಸಿ)
ಚಂದಾಗಿ ಕುಣೀತೀ ಅಳಿಯಮ್ಮಯ.

ಅಳಿಯ— ಮಾವಯ್ಯ ನೀ ಕಲಿಸಿದ್ದು ಕೋಲಾಟದ ಹಾಡೂ ಕಲಿತಿವ್ನಿ.

ಪಾಣಿ— ಓ ನಿಜವಾಗಿ ?

ಅಳಿಯ— ನಿಜವಾಗಿ. ಹಾಡೋನೆ ?

ಪಾಣಿ— ಊಂ, ಹಾಡು, ಕೇಳೋವ.

ಅಳಿಯ—

ನಾದನಾಮಕ್ರಿಯ

ರಂಗಪ್ಪ ನೋಡೋ ಬರ್ತಾನೇ ನಮ್ಮ
ರಂಗಪ್ಪ ನೋಡೋ ಬರ್ತಾನೇ ।

ಲೋಕಾವನೆಲ್ಲ ಮಾಡ್ಯಾನೋ ರಂಗ
ಲೋಕದಲೆಲ್ಲಾ ಆಡ್ಯಾನೋ
ಲೋಕದಲೆಲ್ಲಾ ಆಡುವ ಆಟಾ
ರಂಗಪ್ಪಾ ಚೆನ್ನಾ ನೋಡ್ಯಾನೋ ॥

ಜೀವದ ಕೋಟೀ ಮಾಡ್ಯಾನೋ ರಂಗ
ಜೀವದ ಉಸುರಾಗಿ ಆಡ್ಯಾನೋ,
ಕೋಟ್ಯಾಂತ್ರ ಜೀವದ ಸೂಸ್ತ್ರರ ಆಗಿ
ಕಾಣದೆ ಒಳಗೇ ಓಡ್ಯಾನೋ ॥

ರಂಗಪ್ಪ ಒಳ್ಳ್ಯೇರ ಮಾಡ್ಯಾನೋ ಅಪ್ರ
ಮನಸಿಲಿ ನಿಂತೇ ಹಾಡ್ಯಾನೋ
ಹಾಡಿ ಆಡಿ ಮನಸನ ಒಪ್ಪಿಸಿ
ಅವರನ್ನೆ ಭಿಕ್ಷೆ ಬೇಡ್ಯಾನೋ ॥

ರಾಕ್ಷಸರನ ರಂಗ ಮಾಡ್ಯಾನೋ ಭಾಳ
ಪಾಪಕ್ಕೆ ಅವರನ್ನ ದೂಡ್ಯಾನೋ
ಪಾಪಕ್ಕೆ ನಾಲಿಗೆ ಚಪ್ಪರಿಸೋರೆ
ಜನ್ಮ ಜನ್ಮಾಂತರ ಕಾಡ್ಯಾನೋ ॥

ರಂಗಪ್ಪ ಹೆಣ್ಣನ್ನ ಮಾಡ್ಯಾನೋ ಆ
ಹೆಣ್ಣಲಿ ಹೆಣ್ಣಾಗಿ ಕೂಡ್ಯಾನೋ
ಹೆಣ್ಣಾಗಿ ಮನಸರ ಕಣ್ಮುಂದೆ ಅಡ್ಡಾಡಿ
ತಡದಾರೋ ಇಲ್ಲೋ ನೊಡ್ಯಾನೋ ॥

ರಂಗಪ್ಪ ಗಂಡಸರ ಮಾಡ್ಯಾನೋ ಬಾಳ
ಉಳುಮೆಗೆ ಅವರನ್ನ ಹೂಡ್ಯಾನೋ
ಕಷ್ಟದುಃಖದ ಉಕ್ಕೆ ಆಸರಿಗೆ
ತಡದಾರೋ ಸೋತಾರೋ ನೋಡ್ಯಾನೋ ॥

ರಂಗಪ್ಪ ನಿನ್ನನ್ನ ಮಾಡ್ಯಾನೋ ನಿಂಗೆ
ನೀನೆಂಬೊ ಆತುಮ ನೀಡ್ಯಾನೋ
ಮಗನನ್ನ ಆಟಕ್ಕೆ ಕೇಳುವ ತಂದ್ಯಂತೆ
ತನಗದ ಕೊಡು ಅಂತ ಬೇಡ್ಯಾನೋ ॥

ರಂಗಪ್ಪ ನನ್ನನ್ನ ಮಾಡ್ಯಾನೋ ನನ್ನ
ಎಲ್ಲಿಂದಾಲೋ ಕರದು ಹಾಡ್ಯಾನೋ
ಎಲ್ಲವನೆ ಅಂತ ಅತ್ತಿತ್ತ ನೋಡಿದ್ರೆ
ಕಾಣದೆ ಮರೆಯಿಂದ ಕಾಪ್ಯಾನೋ ॥

ಎಂದಿಗೆ ನಾ ನಿನ್ನ ನೋಡೇನೋ ರಂಗ
ಎಂದಿಗೆ ನಾ ನಿನ್ನ ಕೂಡ್ಯೇನೋ
ಆಡಿದ್ದು ಕಾಡಿದ್ದು ಸಾಕಾಗಿ ಸೋತು
ಬಾ ಎಂದು ಪಾಣೀ ಬೇಡೇನೋ ||

ಪಾಣಿ— (ಕೊನೆಯ ಪದವನ್ನು ಮರಳಿ ಹೇಳುತ್ತ)

ಎಂದಿಗೆ ನಾ ನಿನ್ನ ನೋಡೇನೋ ರಂಗ
ಎಂದಿಗೆ ನಾ ನಿನ್ನ ಕೂಡ್ಯೇನೋ
ಆಡಿದ್ದು ಕಾಡಿದ್ದು ಸಾಕೋ ರಂಗಪ್ಪ
ಬಾ ಎಂದು ಪಾಣೀ ಬೇಡ್ಯೇನೋ ||

(ಎಂದು ಗದ್ಗದಸ್ವರದಿಂದ ಮುಗಿಸಿ, ಮನಸ್ಸಿನ ಉದ್ವೇಗವನ್ನು ತಡೆದು ಕೊಳ್ಳುವನು)

ಅಳಿಯ— ಮಾವಯ್ಯ ಅದ್ಯಾಕ ಅಳತೀಯ ?

ಪಾಣಿ— ದೇವರು ಕಾಣಲಿಲ್ಲ ಅಂತಪ್ಪ.

ಅಳಿಯ— ಅದ್ಯಾಕ ಇಷ್ಟು ಕರದರೂ ಬರೋಲ್ಲ ದೇವರು ?

ಪಾಣಿ— ಏನಾರ ಕೆಲಸವಾಗಿರಬಹುದಲ್ಲಾ.

ಅಳಿಯ— ನಾವು ಕೂಗಿದಾಗ ಅಮ್ಮ ಬರೋಲ್ಲಲ್ಲ ಹಂಗೆ?

ಪಾಣಿ— ಹಂಗೇ.

ಅಳಿಯ— ಅಮ್ಮ ಬರದೇ ಇದ್ರೆ ನಮ್ಮ ಪುಟ್ಟಿ ಸುಮ್ಮಕೆ ಅಳುತಾಳಲ್ಲ.

ಪಾಣಿ— ಹೌದು ನೋಡು, ನಾವೂ ಹಂಗೆನೇ ದೇವರು ಬರಲ್ಲ ಅಂತ ಅಳೋದು.

ಅಳಿಯ— ನಾವೇ ದೇವಸ್ಥಾನಕ್ಕೆ ಹೋಗುವಾ ಬಾ. ಓ ಮರತೇ ಬಿಟ್ಟೆ. ಅಮ್ಮ ಕಾದುಕೊಂಡಿದಾಳೆ.

(ಪಾಣಿಯ ತಂಗಿ ಬರುವಳು)

ತಂಗಿ— ಎಲಾ ಏನೋ. ಮಾವಯ್ಯನ್ನ ಕರತಾರೋ ಅಂದರೆ ಇಲ್ಲೇ ಚಕ್ಕಂದಕೆ ನಿಂತೀ.

ಪಾಣಿ— ನಾನೇ ಸಿಲಿಸಿಕೊಂಡೆ ಅಮ್ಮಯ್ಯ. ಅಮ್ಮಯ್ಯ, ನಿನ್ನ ಮಗ ಆ ಕೋಲಾಟದ ಹಾಡು ಹೇಳಿದ. ಏನು ಅಂದಾಗಿ ಹೇಳಿದ ಅಂತೀಯ ಬಂಗಾರದ ಹಂಗೆ ಹೇಳಿದ.

ತಂಗಿ— ನೀ ಏನು ಮೆಚ್ಚಿಕೊಂಡರೆ ಏನು, ಅವನಿಗೆ ಮಗಳ ಕೊಡೋ ಹಂಗಿಲ್ಲ. ಕಾಲಿಗೆ ಬಿದ್ದು ಕೇಳಿಕೊಂಡರೂ ನೀನು ಮದುವೆ ಯಾಗಲ್ಲ ಅಂದುಬಿಟ್ಟೆ.

ಪಾಣಿ— ಅಮ್ಮಯ್ಯ, ನಾನು ಮದುವೆಯಾಗೊ ಮನುಸನಲ್ಲ. ಸಂಪಾದಿ ಸೋರು ಸಂಸಾರ ನೋಡಿಕೊಂಬೋರು ಮದಿವ್ಯಾಗಬಹುದಲ್ಲ; ನನ್ನ ಬುದ್ಧಿ ಅದಕ್ಕೆಲ್ಲ ಬರವಲ್ಲದು. ತಿರಿದು ತಿನ್ನುವ ಮನುಸ ಹೆಂಡರನ್ನ ತಂದರೆ ಅವಳು ಉಡೋದೇನ ತೊಡೋದೇನ?

ತಂಗಿ— ಅತ್ತಿಗೆ ಅಂತ ಒಬ್ಬಳನ್ನ ನೀನು ಕರತಂದಿದ್ರೆ ನಾವು ಅವಳನ್ನು ಸಾಕುತಿರಲಿಲ್ಲೇ ಊರೋರು ಎಲ್ಲಾರ ಹಂಗೆ. ನಾನು ಕೇಳಿ ಬರಲಿಲ್ಲ. (ಎಂದು ಕಣ್ಣೊರಸಿಕೊಳ್ಳುವಳು)

ಪಾಣಿ— ಆಯಿತು ಬಿಡು. ಇನ್ನು ಆ ಮಾತು ಯಾಕೆ? ಮಗ ಬಂದು ಹೇಳಿದ, ನೀವೆಲ್ಲ ಗುಡಿಗೆ ಹೋಗುತೀರಿ ಅಂತ. ನಾ ಬರಲ್ಲ ಅಂದೆ. ನೀವೆಲ್ಲ ಹೋಗಿ ಅಮ್ಮಯ್ಯ. ನಾ ಇಲ್ಲೇ ಇರುತೀನಿ.

ತಂಗಿ— ಅಣ್ಣಯ್ಯ, ನೀನೇನು ನಮ್ಮ ಗುಡೀನ ಬಿಟ್ಟೇಬಿಟ್ಟೆ. ಹೀಗೆ ಮಾಡಿದರೆ ಹೆಂಗೆ?

ಪಾಣಿ— ಯಾವ ಗುಡೀನೂ ನಮ್ಮದು ಅನಬಾರದವ್ವ. ಎಲ್ಲಾ ಗುಡೀನೂ ದೇವರದು ಅನ್ನಬೇಕು. ಆ ಗುಡೀ ಬಿಟ್ಟರೆ ಏನಾಯಿತು, ಈ ಗುಡೀನ ಹಿಡಿದೆನಲ್ಲೊ.

ತಂಗಿ— ಅಣ್ಣಾವರನ ಬಿಟ್ಟದ್ದಾಯಿತಲ್ಲ.

ಪಾಣಿ— ಅಣ್ಣಾವರನ ಬಿಟ್ಟರೇನು. ಅಪ್ಪನ ಪಾದ ಕಟ್ಟಿಕೊಂಡೆನಲ್ಲೋ. ಇವನೇನು ಅವನೇನು. ಎಲ್ಲಾ ಒಬ್ಬನೇ.

ತಂಗಿ— ಅದು ಹೆಂಗಾದಾತು?

ಪಾಣಿ— ಅಮ್ಮಯ್ಯ, ಮನುಸನ ಮನಸಿಗೆ ದೇವರು ಬೆರಳಲ್ಲಿ ಹಿಡಿದ ಮೇಣ. ಹೆಂಗೆ ತಿದ್ದಿದರೆ ಹಂಗಾಗುತದೆ.

ತಂಗಿ— ಎರಡು ದೇವರು ಒಂದೇ ಆದರೆ ಗುಡಿ ಯಾಕೆ ಬೇರೆ?

ಪಾಣಿ— ನಮ್ಮ ಮನಸ್ಸಿನ ದೇವರು ಕಾಣೋ ಗುಡೀಗೆ ಹೋಗಲಿ ಅಂತ. ನನ್ನ ಮನಸಿನಾಗೆ ದೇವರು ಅಣ್ಣನಾಗಲ್ಲ. ಮಾರಿ ಆಗಲ್ಲ. ರಂಗಪ್ಪ ಆದ. ನಾನಲ್ಲಿ ಬಂದು ಪ್ರಯೋಜನ ಇಲ್ಲ.

ತಂಗಿ— ಯಾಕಿಲ್ಲ ಪ್ರಯೋಜನ? ನೀ ಬಂದರೆ ನಮ್ಮ ಜನ ನಿನ್ನ ದೇವರಿಗೆ ಒದಲು ದೇವರು ಅಂತ ಕಂಡಾರು. ನಿನ್ನ ಬುದ್ಧಿಯೋ ನಿನ್ನ ಗ್ನ್ಯಾನಾನೋ ನಿನ್ನ ಭಕ್ತೀನೋ, ಸೀಮೆಗೆಲ್ಲ ಪರಿಸಿದ್ಧಿಯಾಗಿದೆ. ಎಂತಾ ಮರ್ಯಾದೆ ಮಾಡ್ಯಾರು ನಿಂಗೆ.

ಪಾಣಿ— ಮರ್ಯಾದೆ ಮಾಡಲಿ ಅಂತ ಗುಡೀಗೆ ಹೋಗೋದುಂಟೆ ತಂಗಿ? ದೇವರ ಮುಂದೆ ಮರ್ಯಾದೆ ಎಂತಾದು ನನ್ನವ್ವ. ನಮ್ಮಪ್ಪನ ಸನ್ನಿದೀಲಿ ನಿಂತಾಗ ಕೊನೇಲಿ ನಿಲ್ಲೋದೇ ಚಂದ.

ತಂಗಿ— ಕೋನೇಲಿ ನಿಂತೀಯೋ ನೀನು. ನಿನ್ನ ಬಿಡೋರು ಯಾರು? ನೋಡು ಹರಿದಾರಿ ದೂರದಾಗೆ ನಿಲ್ಲಿಶಾರು ಹೊರಗೆ.

ಪಾಣಿ— ಇವರು ನನ್ನ ಏನು ಹೊರಗೆ ನಿಲ್ಲಿಶಾರು ಅವ್ವ? ದೇವರು ನಿಲ್ಲಿಶಾನೆ ಆಗಲಿ, ನರಮನಸ ನರಮನಸನ್ನ ಹೊರಗೇನು ನಿಲ್ಲಿಸೋದು. ಒಳಗೇನು ಕರೆಯೋದು. ನಾವೂ ಹೊರಗೇ ಅವರೂ ಹೊರಗೇ.

ತಂಗಿ— ಏನೋ ಅಣ್ಣ ನಿನ್ನ ಮಾತು. ಅವರು ಒಳಗೆ ಹೋಗಲ್ಲೇ.

ಪಾಣಿ— ಇಲ್ಲ ಅಮ್ಮಯ್ಯ. ದೇವರು ಯಾರೂ ಬರದ ಹಂಗೆ ಒಳಕ್ಕೆ ಇದಾನೆ. ನನ್ನೊಳಗೆ ನಿನ್ನೊಳಗೆ ಅವರೊಳಗೆ. ನಾವೆಲ್ಲ ಹೊರಗೇ ಇದೇವಿ. ಅವ ಬಿಟ್ಟರೆ ನಾವು ಒಳಗೆ ಹೋಗಬಹುದು. ಇಲ್ಲದೀರ ಇದ್ದರೆ ಹೊರಗೇ ಇರಬೇಕು. ಇದು ಕಾಣವ್ವ ಗುಡಿ. ಗುಡಿ ಒಳಗಿದ್ದುಕೊಂಡು ದೇವರನ್ನ ಕಾಣದಾ ಇದೀವವ್ವ. ಇದು ಕಷ್ಟ. ಆ ಗುಡಿಯಾಗಿರೋರಾದರೂ ದೇವರಿಂದ ಹೊರಗೇ

ತಾನೇ, ಅವ್ವ. ಗಜ ದೂರ ಆದರೇನು ಹರಿದಾರಿ ಆದರೇನು ಒಳಗೆ ಹೋದೋರು ಯಾರು ? ಗುರುಗಳು ಹೇಳಿದಾರವ್ವ :

ನಾನಾವುದನು ಒಳಗು ಒಳಗೆಂಬೆ ಅದರ
ಒಳಗಿನೊಳಗಡೆ ಕುಳಿತು ಮರೆದಿಹನು ಚದುರ
ಮರೆಯಿಂದ ಕರೆಯುವನು ನಾನರಿಯೆ ಬಧಿರ
ಅರಿಯೆನೇ ಮರುಳು ನಾ ಬೊಮ್ಮದೀಹದಿರ

(ಒಬ್ಬ ಮುದಿ ಹೆಂಗಸು ಬರುವಳು)

ಮುದಿಯಾಕೆ— ಅಯ್ಯೋ ನನ್ನಪ್ಪಾ ಇವರೇನು ಇಲ್ಲೇ ಸಂಸಾರ ಹೂಡಿ ದಾರೇನೋ ?

ತಂಗಿ— (ಒಂದು ಕಡೆಗೆ ಸರಿದು) ಹೋಗವ್ವಾ.

ಮುದಿಯಾಕೆ— ಅಯ್ಯೋ ನಾರಾಯಣಾ, ನನ್ನ ಮಾತನಾಡಿಸಿದಳು (ಎಂದು ಮುಖವನ್ನು ಗಂಟಿಕ್ಕಿಕೊಂಡು ಹೋಗುವಳು.)

ಪಾಣಿ— ಅಮ್ಮಯ್ಯ, ನೀ ಜನರನ್ನ ಮಾತಾಡಿಸಬೇಡ. ಅವರು ದೇವ ಸ್ಥಾನಕ್ಕೆ ಹೋಗೋರು ಮೈಲಿಗೆಗೆ ಹೆದರುತಾರೆ.

ತಂಗಿ— ಮಾತು ಅಂತನ್ನೋದು ಅರಿವ್ಯಲ್ಲ ನೀರಲ್ಲ. ನಾ ಮಾತಾಡಿದರೆ ಅವರು ಮೈಲಿಗೆಯಾಗುತಾರೆಯೋ ಅಣ್ಣ ?

ಪಾಣಿ— ಮೈಲಿಗೆ ಆಗುತಾರೋ ಇಲ್ಲೋ, ಆದಿವಿ ಅಂತ ತಿಳುಕೋತಾರೆ. ದೇವಸ್ಥಾನದಲ್ಲಿ ಮನಸು ಸುಕವಾಗಿರೋಲ್ಲ.

ತಂಗಿ— ಈ ಯಮ್ಮ ಮೊಕ ಗಂಟಿಕ್ಕಿದ್ದು ನೋಡಿದರೆ ಇವಳಿಗೆ ಎಲ್ಲೂ ಸುಕ ಇಲ್ಲಂತ ಕಾಣಿಸತದೆ.

ಪಾಣಿ— ಪಾಪ—ಇಂತವರ ಬದುಕು ಕಷ್ಟ. ಈ ಯಮ್ಮ ಇಪ್ಪತ್ತು ವರುಷದಿಂದ ಹಿಂಗೇ ಇದಾರೆ. ಬಾಳು ಬೇವಿನ ಹಂಗೆ ಬಲಿತು ಬಿಟ್ಟಿದೇ ಅವ್ವ. ಬಲಿತಷ್ಟೂ ಕಹಿ.

ತಂಗಿ— ನಮಗೇನೋ ಕಹಿ ತಾನೇ.

ಪಾಣಿ— ಅವರಿಗೂ ಸುಕ ಇಲ್ಲ ಅಮ್ಮಯ್ಯ.

ತಂಗಿ— ಅಂತೂ ತನ್ನ ದುಕ್ಕಾನ ನಮ್ಮ ಮೇಲೆ ಕಾರಿ ಹೋದಳು. ಹಂಗಾದರೆ ನೀ ಬರೋಲ್ಲಲ್ಲ ನಮ್ಮ ಗುಡೀಗೆ.

ಪಾಣಿ— ಇಲ್ಲ ಅಮ್ಮಯ್ಯ. ನೀವು ಹೋಗಿ ಬನ್ನಿ.

(ತಂಗಿಯು ಗಂಡ--ಪಾಣಿಯು ಭಾವ ಬರುತ್ತಾನೆ)

ಭಾವ— ವೋ. ಏನಲೆ–ನನ್ನ ಹೆಣ್ಣೆ. ಅಣ್ಣನ್ನ ಕರತರತೀನಿ ಅಂದವಳ ಇಲ್ಲೇ ನಿಂತೆ ?

ತಂಗಿ— ಕರದು ಸಾಕಾತು. ಅವ ಬರಲ್ಲಂತೆ.

ಭಾವ— ಯಾಕ ಪಾಣ್ಯಾಪ್ಪ, ನಮ್ಮ ಗುಡೀ ಬಿಟ್ಟೇ ಬಿಟ್ಟೆ ?

ಪಾಣಿ— ಅಣ್ಣಾ, ನನಗಾ ರಕ್ತ ನೋಡಿದರೆ ತಲೆ ತಿರುಗತದೆ.

ಭಾವ— ನನಗೂ ಹಂಗೇ ಅಪ್ಪ. ಆದರೂ ಒಂದೊಂದು ಸಲ ಹೋಗ ಬೇಕಲ್ಲಾ. ಅದಕಾಗಿ ಹೋಗೋದು. ಅಂದರೂ ನಾನು ಕೂಡ ರಂಗಪ್ಪನಿಗೆ ಶರಣಾಗಿದೀನಿ.

ಪಾಣಿ— ಬಹಳ ಸಂತೋಷ.

ಭಾವ— ನಾನೂ ಎರಡು ಪದ ಮಾಡಿವಿನಿ. ಈ ಹೈಕಳಿಗೆ ಹೇಳಿಕೊಟ್ಟಿವಿನಿ.

ತಂಗಿ— ನೀನು ಪದಾ ಬೇರೆ ಮಾಡಿದಿಯೇನ ನಾ ಕಾಣದ್ದ ?

ಭಾವ— ಕಾಣದೀರ ಇದ್ದರೆ ಏನಾಯ್ತು, ಈಗ ಕಂಡಿಯೇಳು. ಲೇ ಹೈದಾ, ಬಾರ ಇಲ್ಲ. ಪದಾ ಹೇಳಿ ಕೋಲು ಹಾಕಲ.

ತಂಗಿ— ಕೋಲು ಎಲ್ಲಿ ಇಲ್ಲಿ ?

ಭಾವ— ಇ.ಕೋ ತಂದಿವಿನಿ. ಅಲ್ಲಿ ಗುಡೀ ಮುಂದೆ ಹಾಕಸಾನ ಅಂತಿದ್ದಿ. ನಿಮ್ಮ ಅಣ್ಣಾ ನೋಡಲಿ ಅಳಿಯುಮ್ಮೈಯನ ಕುಣಿತ ಅಂತ. ಅಲ್ಲಂತೂ ಬರಲಿಲ್ಲ. ಇಲ್ಲೇ ನೋಡಲೇಳು.

(ಭಾವನೂ ಅಳಿಯನೂ ಕೋಲಾಟ ಆಡುವರು.)

ನಾದನಾಮಕ್ರಿಯ

ರಂಗಪ್ಪ ಬಂದು ನನ್ನ ಕರ್ಮ
ಹರಿಸಿ ಉದ್ಧರಿಸೋ ನಿನ ಧರ್ಮ

ನಿನ್ನ ಬಿಟ್ಟರೆ ಕಾಯುುವವರಿಲ್ಲ
ನೀ ಬಲ್ಲೆಯಲ್ಲ ಈ ಮರ್ವ್ಮ ॥

ಬಕ್ತ್ರರು ಕರೆದರೆ ಗರುಡೇನ
ಏರಿ ಬಂದು ಹಗೆ ಬುರುಡೇನ
ಒಡೆಯುತೀ ಅಂತ ಹೇಳ್ಯಾರೋ
ಇವತ್ತ್ಯಾ ನಿನ ಕಿವಿ ಕುರುಡೇನ ॥

ಇಲ್ದಿದ್ರೆ ನನ್ನ ಮೇಲೆ ಹುರುಡೇನ
ಕಾಮ್ಧೇನು ನನ್ನ ಪಾಲ್ಗೆ ಬರಡೇನ
ಕೇಳಿದ್ದ ಕೊಡುವಂತ ಕಲ್ಪವೃರ್ಕ್ಷ
ನನ್ನ ಪಾಲಿಗೆ ಬರಿ ಕೊರಡೇನ ॥

ಕೂಗುವುದನು ಕೇಳೋ ರಂಗಪ್ಪಾ
ಬರದೀರ ನಿಂತರೆ ಹೆಂಗಪ್ಪಾ
ಅತ್ತ್ರರೂ ಹೆತ್ತಾ್ರಕಿ ಬರದಿದ್ರೆ
ಮಗುವಿನ ಗತಿ ಬಹು ಭಂಗಪ್ಪಾ ॥

ಮೋಡಾ ನೀರನ್ನ ನುಂಗಲು
ಹಾಲು ಕೂಡುವ ಪೈರಿಗಿಂಗಲು
ಅಯ್ಯೋ ಅಂತ ನೀನನದಿದ್ರೆ
ನಮ್ಮೋರು ಬದುಕೋದು ಹೆಂಗೆಲೊ ॥

(ಇಬ್ಬರು ಸುಮಂಗಲೆಯರು ಒಬ್ಬ ಆಳು ಬರುವರು)

ಆಳು— ಎಲಾ. ಏನಿರೋ ಇದು ನಿಮ್ಮ ರಾದ್ಧಾಂತ ಈ ದಾರೀಲಿ. ಇದೇನು ಅಣ್ಣಾವರ ಗುಡಿ ಅಂತ ತಿಳಿದಿರಾ. ನಡೀರಿ ಆಚೆಗೆ.

ತಂಗಿ— ಸಾಕು ಬಿಡು ನಿನ್ನ ಕೋಲಾಟ. ಆಯಿತಲ್ಲ ಮುಕಕ್ಕೆ ಮಂಗಳಾರತಿ. ನಡಿ ಹೋಗೋವ ಗುಡಿಗೆ.

ಭಾವ— ಮಂಗಳಾರತಿ ಏನಾದದ್ದು. ಪದಾ ಕೇಳಿ ಚಂದಾಗಿಲ್ಲ ಅಂದರೇನು. ಏನು ಪಾಣ್ಯಪ್ಪ. ಪದಾ ಚಂದಾಗಯಿತಾ ?

ಪಾಣಿ— ಭಾವಯ್ಯ ಪದದ ಚಂದ ಮನಸಿನ ಚಂದ. ನಿನ್ನ ಮನಸು ಮಗುವಿನ ಮನಸು. ನಿನ ಪದ ಮಕ್ಕಳ ಮಾತ ಹಂಗೆ ಅದೆ. ಚಂದಾಗದೆ.

ಭಾವ— ಕೇಳಲೇ ಹೆಣ್ಣೆ. ನಿಮ್ಮಣ್ಣ ಹೇಳೋ ಮಾತ. ಇನ್ಯಾರು ಇದಕಿಂತ ಕಂಡೋರು. ಪಾಣ್ಯಪ್ಪ ಚಂದಾಗದೆ ಅಂದ ಅಂತೀನಿ. ನೋಡೋವ ಯಾರು ಕಿಮಕ್ಕಮಕ್ಕಂತಾರೇನೊ. ಒಳತಾತು, ಲೇ ಹೈದ, ಮಾವಯ್ಯ ಹೇಳಿಕೊಟ್ಟದ್ದು ಕ್ರಿಷ್ಟರಾದೆ ಆಟ ನೀನೂ ನಿನ ತಮ್ಮನೂ ಆಡಿ ತೋರಿಸಿದಿರೇನೋ ಮಾವನಿಗೆ.

ಅಳಿಯ— ಬಟ್ಟೆ ನಿನ್ನೇ ಅಲ್ಲ ಕೊಟ್ಟದ್ದು. ಈವತ್ತು ಗುಡೀಲ ಆಡೋದಂದ್ರೆ.

ಭಾವ— ಪಾಣ್ಯಪ್ಪಾ, ಏನು ಆಡುತಾರಂತೀಯಾ. ನೀನು ನೋಡಬೇಕಲ್ಲ ಅದನ್ನ.

ಪಾಣಿ— ಇನ್ಯಾವಾಗಲಾದರೂ ನೋಡಿದರೆ ಸರಿ.

ಭಾವ— ಲಾ ಹೈದ, ಮಧ್ಯಾಹ್ನಕ್ಕೆ ತಮ್ಮನ ಕರಕೊಂಡು ಬಂದು ಇಲ್ಲಿ ಆಡಿ ತೋರಿಸು, ಏನಲೇ.

ಅಳಿಯ— ಮಧ್ಯಾಹ್ನಕ್ಕೆ ಬರೋಣೆ ಮಾವಯ್ಯ?

ಪಾಣಿ— ಬನ್ನಿ ಅಪ್ಪಾ ಆಡಿ ತೋರಿಸಿ.

ಭಾವ— ನಡೀರ ನಡೀರ ಹೊತ್ತಾಯಿತು. ನಾವು ಬರೋಣೆ ಪಾಣ್ಯಪ್ಪ. ಸಂಜೆಗೆ ಬರ್ತೀವಿ.

(ಎಂದು ಹೆಂಡತಿ ಮಗನನ್ನು ಕರೆದುಕೊಂಡು ಹೊರಡುವನು.)

ಪಾಣಿ—

ಕಮಾಚ

ಏತಕೆನ್ನ ದೂರ ನಿಲಿಸಿದೇ
ಆತುರದಲಿ ಬಳಿಗೆ ಬರಲು ಹಾತೊರೆಯುತಲಿಹುದನರಿತೂ ॥

ಬಲ್ಲ ಮಂದಿ ಒಳ್ಳೆಯುಸಿರು ಬಳಿಗೆ ಸಾರಲಿ ಇಂ
ತಲ್ಲದೆಲ್ಲ ದೂರದಲ್ಲೇ ನಿಲಲಿ ಎಂಬರೇ

ಬಲ್ಲ ಜೀವ ಎಂತಾದರು ಬದುಕಿಕೊಂಬುದೋ ಪ್ರ
ಫುಲ್ಲಕಮಲನಯನ ಹಸುಳೆ ಇಂತು ಬದುಕದೋ ॥

ತಂದೆ ನೀನು ತಾಯಿ ನೀನು ಮಂದಮತಿ ಮಾನವಗೆ
ಕುಂದನೆಲ್ಲ ಮರೆತು ಬಾ ಕಂದ ಎಂಬ ಬಂಧು ನೀನು
ಅಂದು ವೈಕುಂಠದಿಂದ ಭುವಿಗೆ ನಾನು ಬರುವ ವೇಳೆ
ಹಿಂದೆ ನಿಲ್ಲು ಎಂದರೂ ಹಠಮಾಡಿ ಬಂದೆನೇನೋ ॥

ಬದ್ಧ ಜೀವ ನಾನುಹುದೋ ಅಬದ್ಧ ನನ್ನ ಬಾಳ್ವೆಯೆಲ್ಲ
ಶುದ್ಧವಾಗಲಿಲ್ಲ ಇನ್ನೂ ಆಸೆ ಚೇತನ
ಉದ್ಧರಿಸುವ ಸ್ವಾಮಿ ನೀನೆ ಕ್ರುದ್ಧನಾಗಿ ದೂರ ಸರಿದು
ಹೃದ್ದೇಶವ ಶೂನ್ಯ ಮಾಡೆ ಪಾಣಿ ಉಳಿವೆನೇ? ॥

(ಎಂದು ಕೈಮುಗಿದುಕೊಂಡು ನೋಡುತ್ತ ನಿಲ್ಲುವನು)

(ಲೋಕಸಾರಂಗ ಅವನ ಮುಂದೆ ಸೇವಕ ಹಿಂದೆ ಇಬ್ಬರು ಬ್ರಾಹ್ಮಣರು ಬರುವರು)

ಸೇವಕರು— ಯಾರಯ್ಯ ಅಲ್ಲಿ, ದಾರೀ ಬಿಡು. ಪಾರಪತ್ತೇಗಾರರು ದಯ ಮಾಡಿಸುತ್ತಿದ್ದಾರೆ.

ಲೋಕಸಾರಂಗ— ಅಯ್ಯಾ ಇರಲಿ ಬಿಡು. (ಪಾಣಿ ದಾರಿ ಬಿಟ್ಟು ದೂರ ನಿಂತು ನಮಸ್ಕರಿಸುವನು) ಭಾಗವತರು ಧನ್ಯರು.

ಪಾಣಿ— ಭಾಗವತರ ಅನುಗ್ರಹದಿಂದ ನಾ ಧನ್ಯ.

(ಲೋಕಸಾರಂಗನು ಮುಂದರಿಯುವನು. ಇತರರು ಅವನ ಜೊತೆಗೆ ಹೋಗುವರು)

ಸ್ಥಾನ ೨

ರಂಗನಾಥ ದೇವಾಲಯದ ಒಳಗಡೆ, ಲೋಕಸಾರಂಗನೂ ಜೊತೆಯ ಇಬ್ಬರು ಬ್ರಾಹ್ಮಣರೂ ಬರುವರು. ಅವರಲ್ಲಿ ಒಬ್ಬನ ಹೆಸರು ಆಳ್ವಾರ್, ಇನ್ನೊಬ್ಬನ ಹೆಸರು ಮಧುರ. ಆಳ್ವಾರ್ ಕಾಂಚೀಪುರದಿಂದ ಬಂದಿರುವವನು.

ಆಳ್ವಾರ್— ನಿಮ್ಮ ದೇವಾಲಯದ ಏರ್ಪಾಡುಗಳನ್ನು ನೋಡಿ ನನಗೆ ಬಹಳ ಆನಂದವಾಯಿತು. ಕಾಂಚೀಪುರದ ದೇವಾಲಯಕ್ಕೆ ಇಂಥ ಏರ್ಪಾಡು ಬೇಕು. ಆದರೆ ತಮ್ಮಂಥವರು ಅಲ್ಲಿ ಇಲ್ಲ.

ಲೋಕ— ವಿಶ್ವಾಸದಿಂದ ಹೀಗೆ ಹೇಳುತ್ತಿದ್ದೀರಿ. ಆದರೆ ಈ ಕೆಲಸ ಇಲ್ಲಿ ಚೆನ್ನಾಗಿರುವುದಾದರೆ ಅದನ್ನು ರಂಗನಾಥನೇ ನಡೆಸಿ ಕೊಳ್ಳುತ್ತಿದ್ದಾನೆ.

ಆಳ್ವಾರ್— ಒಪ್ಪಿದೆ. ಅಲ್ಲಿ ವರದರಾಜನೂ ಹಾಗೆ ನಡೆಸಿಕೊಳ್ಳಲಿ ಎಂದು ನನ್ನ ಅಪೇಕ್ಷೆ.

(ಅರ್ಚಕನು ಬರುವನು)

ಅರ್ಚಕ— ಪ್ರಾತಃಕಾಲದ ಪೂಜೆ ಮುಗಿಯಿತು. ಮಂಗಳಾರತಿಗೆ ಸಿದ್ಧವಾಗಿದೆ.

ಲೋಕ— ಮಧುರಸ್ವಾಮಿ, ಭಾಗವತರಿಗೆ ಸನ್ನಿಧಿಗಳನ್ನು ತೋರಿಸಿ ಕೊಂಡು ಬಾ. ನಾನು ಮಂಗಳಾರತಿ ನಡೆಯಿಸಿ ಬರುತ್ತೇನೆ.

ಮಧುರ— ಆಗಲಿ.

(ಲೋಕಸಾರಂಗನೂ ಅರ್ಚಕನೂ ಹೋಗುವರು)

ಆಳ್ವಾರ್—ನಿಮ್ಮ ಸರ್ವಾಧಿಕಾರಿಗಳು ಬಹು ದಕ್ಷರು, ಬಹು ಜ್ಞಾನಿಗಳು.

ಮಧುರ— ಹೌದು.

ಆಳ್ವಾರ್— ನಮ್ಮ ಸರ್ವಾಧಿಕಾರಿಗಳು ಜ್ಞಾನಿಗಳು ಆದಂ ಎಂಕ್ತಾರು. ದೇವಸ್ಥಾನದ ಸಣ್ಣ ಸಣ್ಣ ವಿಷಯಗಳನ್ನು ನೋಡಿಕೊಳ್ಳುವುದಕ್ಕೆ ಅವರ ಮನಸ್ಸು ಹೋಗುವುದಿಲ್ಲ. ಆದ್ದರಿಂದ ಕೆಲಸ ಚೆನ್ನಾಗಿಲ್ಲ.

ಮಧುರ— ಲೋಕಸಾರಂಗರೂ ವಿರಕ್ತರೆ. ಸಂಸಾರಿಗರಲ್ಲ. ಆದರೆ ತಮ್ಮ ವಿಷಯಕ್ಕೆ ವಿರಕ್ತರಾದರೂ ದೇವರ ವಿಷಯಕ್ಕೆ ಅವರು ಸಕ್ತರು. ತಾವು ಗ್ರಹಿಸಿರುವಂತೆ ಈ ದೇವಾಲಯದ ಕೆಲಸ ಇಷ್ಟು ಚೆನ್ನಾಗಿ ನಡೆಯುತ್ತಿರುವುದು ಅವರ ಮಹಿಮೆಯಿಂದಲೇ.

(ಒಳಗೆ ವೇದಘೋಷ, ಗಂಟೆಯ ಶಬ್ದ ಮಂಗಳಾರತಿಯಾಗುತ್ತಿರುವುದನ್ನು ಸೂಚಿಸುತ್ತದೆ.)

ಆಳ್ವಾರ್— ಅಲ್ಲದೆ ನಮ್ಮ ಕಡೆ ಬಂದಿರುವ ಮರ್ಯಾದೆಗಳ ಜಗಳವೂ, ಜಾತಿಗಳ ಜಗಳವೂ ನಿಮ್ಮಲ್ಲಿ ಬಂದಿಲ್ಲವೆಂದು ಕಾಣುತ್ತದೆ.

ಮಧುರ— ಮರ್ಯಾದೆಯ ಜಗಳವೇನು ?

ಆಳ್ವಾರ್— ನಮ್ಮಲ್ಲಿ ಕೆಲವರು ನಮ್ಮಾಳ್ವಾರ ಸಂಬಂಧ ಎಂತ, ಮಧುರ ಕವಿಯಾಳ್ವಾರ ಸಂಬಂಧ ಎಂತ ಮರ್ಯಾದೆಗಳಿಗೆ ಜಗಳ ಮಾಡುತ್ತಾ ಇದಾರೆ.

ಮಧುರ— ನಮ್ಮಲ್ಲಿ ಲೋಕಸಾರಂಗರಷ್ಟು ಬಲ್ಲವರಿಲ್ಲ. ಅವರಿಗೆ ಮೊದಲ ಮರ್ಯಾದೆ ಕೊಡಬೇಕು ಎಂತ ಎಲ್ಲರ ಇಷ್ಟ. ಅವರು ಎಲ್ಲರಿಗೂ ಮರ್ಯಾದೆ ಮಾಡಿಸಿ ಆಮೇಲೆ ತಾವು ತೆಗೆದುಕೊಳ್ಳುತ್ತಾರೆ. ನಾನು ದೊಡ್ಡವ ನನಗೆ ಹೆಚ್ಚು ಮರ್ಯಾದೆ ಬರಬೇಕು ಎನ್ನುವಷ್ಟು ಇಲ್ಲಿಯ ವೈಷ್ಣವರು ಕೆಟ್ಟಿಲ್ಲ. ಅದು ವೈಷ್ಣವನಿಗೆ ಅನುಚಿತ ವಾದ ಎಂದು ಎಲ್ಲರೂ ಬಲ್ಲರು.

ಆಳ್ವಾರ್— ಜಾತಿಗಳ ವಿಚಾರ ?

ಮಧುರ— ಅದೂ ಅಷ್ಟೇ. ಜಾತಿ ಜಾತಿಗೆ ಮುಖಂಡರನ್ನು ಆರಿಸಿ ಅವರವರ ಜನರ ವಿಷಯ ಅವರನ್ನು ಕೇಳುತ್ತೇವೆ. ಲೋಕಸಾರಂಗರು ತನಗೆ ಜಾತಿಯ ಬಂಧನವಿಲ್ಲವೆಂದ ಮೇಲೆ ಉಳಿದ ಜಾತಿಯವರು ಏಕೆ ಹೆಮ್ಮೆ ಪಡುವರು ? ಅಲ್ಲದೆ ಅವರಲ್ಲಿಯೂ ಬಹಳ ಜ್ಞಾನಿಗಳು ಇದಾರೆ. ಇಂದು ದಾರಿಯಲ್ಲಿ ನಿಂತಿದ್ದನಲ್ಲ ಒಬ್ಬಾತ ಆತನು ಅಂತ್ಯಜರಲ್ಲಿ ಹುಟ್ಟಿದ ಭಾಗವತನು. ಅವನ ಯೋಗ್ಯತೆ ಲೋಕಸಾರಂಗರಿಗೆ ಹೊರತು ಪ್ರಾಯಶಃ ಯಾರಿಗೂ

ಇಲ್ಲ. ಆದರೆ ಅವನಷ್ಟು ವಿನಯದ ಜನ ಬೇರೆ ಇಲ್ಲ. ಆತನು ನಮ್ಮ ನಿಮ್ಮ ಕಾಲಧೂಳಿಯನ್ನೂ ತಲೆಗೆ ಹಾಕಿಕೊಳ್ಳುತ್ತಾನೆ.

(ಅಲ್ಲಿ ಮೂರ್ತಿಗಳನ್ನು ನೋಡಿ)

ಆಳ್ವಾರ್— ಈ ಮೂರ್ತಿಗಳು......

ಮಧುರ— ನಮ್ಮ ಸಂಪ್ರದಾಯದ ಮೂಲಪುರುಷರ ಮೂರ್ತಿಗಳು. ಪೂರ್ವದಿಂದ ಈ ದೇವಾಲಯದಲ್ಲಿ ಇರತಕ್ಕವು.

ಆಳ್ವಾರ್— ಗುರುಪರಂಪರೆಗೆ ನಮೋನಮಃ. ಆದಿಯಲ್ಲಿ ಮಂಡಿಸಿರುವ ಮೂರ್ತಿ ನಮ್ಮಾಳ್ವಾರರದೇನೊ ?

ಮಧುರ—ಅಲ್ಲ. ಅವರು ನಾಲ್ಕನೆಯವರಾಗಿ ಬಿಜಮಾಡಿದಾರೆ. ಆದಿಯಲ್ಲಿ ಪೂದತ್ತಾಳ್ವಾರು. ಪೊಯ್ಗೈಯಾಳ್ವಾರು. ಪೇಯಾಳ್ವಾರು.

ಆಳ್ವಾರ್— ನಮ್ಮಾಳ್ವಾರ್ರು ಆದಮೇಲೆ ?

ಮಧುರ— ಮಧುರಕವಿ ಆಳ್ವಾರ್ರು.

ಆಳ್ವಾರ್— ಇವರು ತಿರುಮಂಗೈಯಾಳ್ವಾರ್ರು.

ಮಧುರ— ಹೌದು.

ಆಳ್ವಾರ್— ಇಲ್ಲಿ ಏನು ಒಂದು ಪೀಠ ಬರಿದಾಗಿದೆ. ಇದರ ಮೇಲೆ ಇದ್ದ ಮೂರ್ತಿ ಏನೋ ಆಗಿರಬೇಕೆಂದು ಕಾಣುತ್ತದೆ.

ಮಧುರ— ಇಲ್ಲಿ ಯಾವಾಗಲೂ ಮೂರ್ತಿಯಿರಲಿಲ್ಲ. ಇನ್ನೂ ಎಷ್ಟು ಜನ ಆಳ್ವಾರ್ರು ಬರುವರೋ ! ಒಂದು ಪೀಠ ಯಾವಾಗಲೂ ಹೆಚ್ಚಾಗಿರಲಿ, ಅಲ್ಲಿಗೆ ಒಬ್ಬ ಆಳ್ವಾರನ್ನು ಬಿಜಮಾಡಿದ ಮೇಲೆ ಇನ್ನೊಂದು ಪೀಠವನ್ನು ಸಿದ್ಧವಾಗಿ ಇಡಿ ಎಂದು ಇಲ್ಲಿಯ ಪೂರ್ವಿಕರ ಅಪ್ಪಣೆ. ಅದರಂತೆ ಈ ಪೀಠವನ್ನು ಹೀಗೆಯೇ ಇರಿಸಿದೆ. ಆಳ್ವಾರೊಬ್ಬರ ಬರವಿಗಾಗಿ ಅದು ಕಾದಿದೆ.

ಆಳ್ವಾರ್— ಬಹು ಒಳ್ಳೆಯ ಭಾವನೆ. ಭಕ್ತರ ಪಂಕ್ತಿಗೆ ಕೊನೆಯುಂಟೆ ?

(ಲೋಕಸಾರಂಗನು ಬರುವನು)

ಲೋಕ— ಇಲ್ಲೇ ಇದ್ದು ಬಿಟ್ಟಿರಿ ಎಂತ ಕಾಣುತ್ತದೆ.

ಆಳ್ವಾರ್— ಹೌದು ತಮ್ಮ ವಿಚಾರವನ್ನೇ ಮಾತನಾಡುತ್ತ ನಿಂತೆವು. ಮಧುರಸ್ವಾಮಿಗಳಿಂದ ತಮ್ಮನ್ನು ಕುರಿತು ಕೆಲವು ಮಾತು ಕೇಳಿ ಆನಂದವಾಯಿತು.

ಲೋಕ— ಮಧುರಸ್ವಾಮಿ ನಮ್ಮ ಗುರುಗಳ ಪುತ್ರರು. ಗುರುಗಳು ಇಲ್ಲಿ ಆಳುತ್ತಿದ್ದಾಗ ನನ್ನನ್ನು ಯಾವಾಗಲೂ ಮೆಚ್ಚಿ ಮಾತನಾಡು ತ್ತಿದ್ದರು. ಅವರು ಪರಂಧಾಮವನ್ನು ಐದಿದ ಮೇಲೆ ಅವರು ಮರೆಯಾದರೂ ಅವರ ವಿಶ್ವಾಸ ಮರೆಯಾಗಲಿಲ್ಲವೆಂದು ಅವರ ಕುಮಾರರು ತೋರಿಸುತ್ತಿದಾರೆ.

ಮಧುರ— ನಾವು ಪರಸ್ಪರ ಉಪಚಾರದ ಮಾತನಾಡಿದಂತಾಗುತ್ತದೆಂದು ನಾನು ಸುಮ್ಮನಿರಬೇಕಾಗಿದೆ. ಆದರೆ ಅವರು ತೀರಿ ಹೋದರೂ ಅವರ ವಿಶ್ವಾಸ ಕಾಯುತ್ತಿದೆಯೆಂದು ನನ್ನಿಂದ ನಿಮಗೆ ತೋರು ವಂತೆ ನಿಮ್ಮಿಂದ ನನಗೆ ತೋರುತ್ತಿದೆ.

ಆಳ್ವಾರ— ನಿಮ್ಮ ಯಜಮಾನರು ಇಲ್ಲಿ ಈ ಮೊದಲು ಸರ್ವಾಧಿಕಾರ ದಲ್ಲಿದ್ದರೋ ?

ಮಧುರ— ಹೌದು. ಈ ದೇವಸ್ಥಾನದಲ್ಲಿ ಯಾವಾಗಲೂ ಒಬ್ಬರ ಮಾತು ದೇವರ ಮಾತಿನಂತೆ ನಡೆಯತಕ್ಕದ್ದೆಂದು ಸಂಪ್ರದಾಯ. ಆ ಒಬ್ಬರು ಸರ್ವಾಧಿಕಾರದಲ್ಲಿರಬೇಕು. ನಮ್ಮ ಯಜಮಾನರಿಗೆ ಅವರ ಗುರುಗಳು ಈ ಕೆಲಸವನ್ನು ವಹಿಸಿ ಪರಂಧಾಮವನ್ನು ಐದಿದರು. ಅವರು ದೇವರೊಂದಿಗೆ ಮಾತನಾಡುತ್ತಿದ್ದರೆಂದೇ ನಮ್ಮ ಯಜಮಾನರ ನಂಬಿಕೆ.

ಲೋಕ— ನಮ್ಮ ಗುರುಗಳೂ ಕೂಡ ದೇವರೊಂದಿಗೆ ಮಾತನಾಡು ತ್ತಿದ್ದರು.

ಮಧುರ— ಹೌದು. ಆದರೆ ದೇವರು ಮಾತನಾಡಿದ್ದು ಆ ಗುರುಗಳಿಗೆ ಕೇಳಿಸುತ್ತಿದ್ದಂತೆ ನಮ್ಮ ಯಜಮಾನರಿಗೆ ಕೇಳಿಸುತ್ತಿರಲಿಲ್ಲವಂತೆ. ಆ ಶಕ್ತಿ ತನ್ನಲ್ಲಿ ಬೆಳೆಯಲಿಲ್ಲವೆಂದು ಅವರು ಸದಾ ವ್ಯಥೆಪಡುತ್ತಿ ದ್ದರು. ಸಂಸಾರಿಯಾದದ್ದರಿಂದ ಅದು ಬೆಳೆಯಲಿಲ್ಲವೆಂದು ಅವರ

ಭಾವನೆ. ಆ ಗುರುಗಳಲ್ಲಿ ಕಾಣುತ್ತಿದ್ದ ಶಕ್ತಿ ನಮ್ಮ ಲೋಕ ಸಾರಂಗರಲ್ಲಿ ಕಾಣುತ್ತಿದೆಯೆಂದು ಅವರು ಹೇಳಿದರು. ನೀನು ಸಂಸಾರಿಯಾಗದೆ ನಿಂತರೆ ಇದು ಅಭಿವೃದ್ಧಿಯಾಗಬಹುದೇನೋ ಎಂದು ಅವರು ಅಪ್ಪಣೆ ಕೊಡಿಸುತ್ತಿದ್ದರು.

ಹರಿದಾಸ—

(ಒಂದು ಕಡೆಯಿಂದ ಬರುತ್ತ)

ಎಲ್ಲಿಯೋ ದೂರದಲ್ಲಿ ಇಲ್ಲವಯ್ಯ ನರಕನಾಕ
ಎಲ್ಲಿಯೋ ಎತ್ತಲೋ ಇಲ್ಲವೋ ವಿಷ್ಣುಲೋಕ
ಎಲ್ಲಿಯೋ ಎಂದೂ ಇದ್ದು ಮರೆಯಲಿಲ್ಲ ಭಕ್ತಿಭುಕ್ತಿ
ಇಲ್ಲಿ ಈಗ ಇಹವು ನಿನ್ನ ನಾಕನರಕ ಸಕ್ತಿಮುಕ್ತಿ

(ಎಂದು ಹಾಡಿಕೊಂಡು ಇನ್ನೊಂದು ಕಡೆಗೆ ಹೋಗುವನು)

ಅರ್ಚಕ— (ಬಂದು ಲೋಕಸಾರಂಗನಿಗೆ) ಸ್ವಂತ ಸೇವೆಯ ಕೆಲವರು ತಮ್ಮನ್ನು ಅಪೇಕ್ಷಿಸುತ್ತಾರೆ.

ಲೋಕ— ತಾವೂ ದಯಮಾಡುತ್ತೀರಾ? ಹೋಗೋಣ.

ಆಳ್ವಾರ್— ಅಗತ್ಯವಾಗಿ (ಎಂದು ಹೊರಡುವನು. ಅರ್ಚಕನೂ ಲೋಕಸಾರಂಗನೂ ಮುಂದೆ ಹೋಗುವರು. ಆಳ್ವಾರ್ ಮಧುರಸ್ವಾಮಿ ಹಿಂದೆ ನಿಂತು ಇನ್ನೂ ಕೆಲವು ಮಾತನಾಡುವರು.) ಸರ್ವಾಧಿಕಾರಿಗಳು ಬ್ರಹ್ಮಚಾರಿಗಳೊ?

ಮಧುರ— ಹೌದು.

ಆಳ್ವಾರ್— ಅವರು ದೇವರೊಂದಿಗೆ ಮಾತನಾಡುತ್ತಾರೆಯೆ?

ಮಧುರ— ಅದು ತನಗೆ ಹೆಚ್ಚೆಂದು ಅವರ ಎಣಿಕೆ. ದೇವರು ತನ್ನ ಇಷ್ಟ ಯನ್ನು ತಿಳಿಸುವುದಕ್ಕೆ ಯಾವ ದಾರಿಯನ್ನು ತೆಗೆದುಕೊಳ್ಳುತ್ತಾನೋ ಅದನ್ನು ತೆಗೆದುಕೊಳ್ಳಲಿ, ಮಾತನಾಡಿಸುವುದು ಎನ್ನುವುದು ಅತಿ ಸಲಗೆ ಎಂದು ಅವರ ಅಭಿಪ್ರಾಯ. ಅದರಿಂದ ಅವರು ಆ ಗೋಜಿಗೆ ಹೋಗಿಲ್ಲ.

ಆಳ್ವಾರ್— ದೇವರ ಇಷ್ಟ ಇವರಿಗೆ ಹೇಗೆ ತಿಳಿಯುತ್ತದೆ?

ಮಧುರ— ಸಾಮಾನ್ಯವಾಗಿ ಬರುವ ವಿಷಯವೆಲ್ಲ ಇವರ ಬುದ್ಧಿಗೇ

ಸಾಧ್ಯವಾಗಿರುತ್ತದೆ. ಹಾಗೆ ಸಾಧ್ಯವಲ್ಲದ ವಿಷಯ ಬಂದಾಗ ದೇವರು ಇಚ್ಛೆಯನ್ನು ಇವರು ಯೋಗನಿದ್ರೆಯಲ್ಲಿರುವಾಗ ಪ್ರತ್ಯಕ್ಷವಾಗಿ ತಿಳಿಸುತ್ತಾರೆ.

ಆಳ್ವಾರ್— ಹೀಗೆ ಎಷ್ಟು ಸಲ ಆಗಿದೆ ?

ಮಧುರ— ಮೂರು ನಾಲ್ಕು ಸಲ ಆಗಿದೆ. ಹಾಗೆ ಕಂಡಾಗ ಇವರಿಗೆ ನಾವು ನೀವು ಮಾತನಾಡಿದೆವೆನ್ನುವುದೂ ಅದರ ಅರ್ಥವೂ ಎಷ್ಟು ಸ್ಪಷ್ಟವಾಗಿ ಅನುಭವಕ್ಕೆ ಬರುವುದೋ ದೇವರ ಮಾತು ಎನ್ನುವುದೂ ಅದರ ಅಭಿಪ್ರಾಯವೂ ಅಷ್ಟು ಸ್ಪಷ್ಟವಾಗಿ ಖಚಿತವಾಗಿ ಅನುಭವಕ್ಕೆ ಬರುತ್ತದೆ. ಇದನ್ನು ತಿಳಿದೇ ನಮ್ಮ ಯಜಮಾನರು ಇವರನ್ನು ಸರ್ವಾಧಿಕಾರಕ್ಕೆ ನಿಲ್ಲಿಸಿ ತಾವು ವಿಶ್ರಾಂತರಾದರು.

ಅರ್ಚಕ— (ಬಂದು) ಸ್ವಂತ ಸೇವೆಗಳು ಆರಂಭವಾಗಿವೆ. ತಮ್ಮನ್ನೂ ಕರೆತರ ಹೇಳಿದರು.

ಆಳ್ವಾರ್— ಈ ಸ್ವಂತ ಸೇವೆ ಎನ್ನುವುದೇನು ?

ಮಧುರ— ದೇವಸ್ಥಾನದ ಏರ್ಪಾಡಿನಂತೆ ಸೇವೆ ನಡೆಯುವ ವೇಳೆ ಯಾರಾದರೂ ವೇದವನ್ನೋ ಗೀತವನ್ನೋ ನೃತ್ಯವನ್ನೋ ದೇವರಲ್ಲಿ ನಿವೇದಿಸಬೇಕೆಂದರೆ ಹೊತ್ತಿರುವುದಿಲ್ಲ. ಆದರೆ ಅನೇಕರಿಗೆ ಇಂಥ ಸೇವೆಮಾಡಬೇಕೆಂದು ಆಸೆಯಿರಬಹುದು. ಅಂಥವರು ಪೂಜೆ ಪೂಜೆಗೆ ಮಧ್ಯೆ ಬಿಡುವಿರುವ ಹೊತ್ತಿನಲ್ಲಿ ತಮ್ಮ ಇಷ್ಟದ ಸೇವೆಯನ್ನು ಸಲ್ಲಿಸಬಹುದು ಎಂದು ನಮ್ಮ ಸರ್ವಾಧಿಕಾರಿಗಳು ಏರ್ಪಾಡು ಮಾಡಿದಾರೆ. ದೇವರು ತಂದೆ ತಾಯಿ ಗುರು ಎಂಬ ಯಾವ ಭಾವದಿಂದಲಾದರೂ ಸೇವೆಮಾಡುವುದಕ್ಕೆ ಇದು ಭಕ್ತರಿಗೆ ಅವಕಾಶವನ್ನು ಕೊಡುತ್ತದೆ. ಬಂದು ನೋಡಿದರೆ ಮಾದರಿ ತಿಳಿಯುತ್ತದೆ.

ಆಳ್ವಾರ್— ಬಹು ಚೆನ್ನಾದ ಏರ್ಪಾಡು. ಇದನ್ನು ನೋಡೋಣವೆಂದು ನನಗೆ ಆಸೆಯಾಗುತ್ತದೆ.

(ಎಲ್ಲರೂ ಹೋಗುವರು)

ಸ್ಥಾನ ೩

ದೇವಾಲಯದ ಒಳ ಅಂಗಳ. ಸಾರಂಗರು ಇತರ ಅನೇಕರು ನಿಂತಿದಾರೆ. ಜನರು ಸಾರಂಗರಿಗೆ ನಮಸ್ಕಾರ ಮಾಡುತ್ತಿದಾರೆ. ಆತನು ಬಗ್ಗಿ ಅವರಿಗೆ ನಮಸ್ಕಾರ ಮಾಡುತ್ತಾ ನಿಂತಿದಾನೆ. ಆಳ್ವಾರ್ ಮಧುರಸಾಮಿ ಬರುತ್ತಾರೆ.

ಲೋಕ— ಇನ್ನು ಸಾಕು. ಸೇವೆಯನ್ನು ಆರಂಭಿಸಿ.

ಹರಿದಾಸ— ನಾನು ರಂಗನಾಥನಲ್ಲಿ ಈ ಗೀತೆಯನ್ನು ಸಮರ್ಪಿಸುತ್ತೇನೆ.

(ಎಂದು ಹಾಡುತ್ತಾನೆ)

ಮೋಹನ

ನಿಜವನಾರಯಿಸು ಮನುಜಾ ।
ನಿಜವನಾರಯಿಸಿ ವಾರಿಜನಾಭನಡಿಗಳಲಿ
ಋಜುಭಾವದಿಂದ ಆತ್ಮವನರ್ಪಿಸು ॥

ಭಕ್ತಿಯಿಲ್ಲದ ಪೂಜೆ ಮುಕ್ತಿಯನು ತರಬಹುದೆ
ಕಣ್ಣಿಲ್ಲದಿಹ ಸೂಜಿಯಲಿ ಹೊಲಿಗೆಯಹುದೆ
ಆ ಪೂಜೆಯಲಿ ಜೀವ ಈ ಸೂಜಿಯಲಿ ದಾರ
ಇದ್ದೆಡೆಯೊಳಿಹವಲ್ಲದಿನ್ನುಂಟೆ ಬೇರೆ ? ॥

ಹೆಮ್ಮೆ ಮುರಿಯದ ಬಾಳು ನೆಮ್ಮಿಕೆಯ ಪಡೆಯುವುದೆ
ಬಾಯಿಡದ ಬುರುಡೆ ತ್ರೀಚರ್ಣಕೆಡೆಯಹುದೆ
ಆ ಬಾಳು ಈ ಬುರುಡೆ ಎಂದೆಂದಿಗೂ ಟೊಳ್ಳು
ಎರಡರಾಂತರ್ಯವೂ ಬರಿಯ ಪೊಳ್ಳು ॥

ಕ್ರಿಯೆಯಾಗದಿಹ ಭಾವ ತಾನಹುದೆ ಹರಿ ಸೇವ
ಲತೆಯೊಳಡಗಿರುವ ನರುಗಂಪು ಹೂವ
ನನೆಯಾಗದೆಯೆ ದೇವನರ್ಚನೆಗೆ ಸಲಬಹುದೆ
ಭ್ರೂಣವೇ ಪಿತೃಋಣಕೆ ಸಲಿಕೆಯಹುದೆ ? ॥

ಲೋಕ— ಭಕ್ತಿಯಿಲ್ಲದ ಪೂಜೆ ಕಣ್ಣಿಲ್ಲದ ಸೂಜಿ. ಆ ಪೂಜೆಯಲಿ ಜೀವ ಈ ಸೂಜಿಯಲಿ ದಾರ. ಸರಿಯಾಗಿ ಹೇಳಿದಿರಿ. ಆ ಮೇಲೆ ಯಾರು ?

ಇಬ್ಬರು ಸುಮಂಗಲೆಯರು— ನಾವು ಒಂದುಮಂಡಲ ಒಂದು ಹಾಡು ಹೇಳುವುದು ಎಂತ ಹರಕೆ ಮಾಡಿಕೊಂಡಿದೇವೆ.

ಲೋಕ— ಹೇಳಿ ತಾಯಿ.

ಸುಮಂಗಲೆಯರು—

ಶಂಕರಾಭರಣ

ಕನವರಿಸದಿರು ರಂಗಧಾಮ ವಾರಿಜನಾಭ
ಕನವರಿಸದಿರು ಶೇಷಶಾಯಿ ಶ್ರೀಶಾ ॥

ಯುಗದಾದಿಯಲಿ ಹಾಸಿದಾದಿ ಶೇಷನ ಮೆಯ್ಯ
ಮೆದುವಾದ ಶಯ್ಯೆ ಇದೆ ಮೊದಲಿನಂತೆ
ಅಗಲಾಗಿ ತೆರೆದು ಸಾವಿರ ಹೆಡೆಯ ಮೇಲೆತ್ತಿ
ಮುದದಿ ಕಾದಿಹನವನು ಬೇಡ ಚಿಂತೆ ॥

ಸಿರಿದೇವಿ ಕಾಲ ಬಳಿ ಕುಳಿತು ಆ ಮೊದಲಂತೆ
ಮೆಲುಮೆಲನೆ ತನ್ನಯಾ ತಳಿರ ತರದ
ಬೆರಳಿನಾಕರದಿಂದ ಕಾಲುಗಳ ಹಿಡಿಯುತ್ತ
ಒಲುಮೆಯಲಿ ಓಲೈಸುತಿಹಳು ವರದಾ ॥

ಬ್ರಹ್ಮರುದ್ರೇಂದ್ರ ಮರುತಾದಿ ದೇವರು ಎಲ್ಲ
ಅಧಿದೈವ ಸುಖದಿ ನಿದ್ರಿಸಲಿ ಎಂದು
ತಮ್ಮ ತಮ್ಮೆಡೆಗಳಲಿ ತಂತಮ್ಮ ಕಾರ್ಯವನು
ವಿಧಿಯರಿತು ನಡೆಸುತಿಹರೈಯ ಇಂದೂ ॥

ನಿದ್ರೆಯಲಿ ಕನವರಿಸಿ ನೀನೊಂದು ನುಡಿ ನುಡಿಯೆ
ಗುಡುಗಿ ಪಡಿನುಡಿವುದದು ಜಗದೆದೆಯಲಿ
ಹೊದ್ದ ಭೀತಿಯಲಿ ಲೋಕಗಳೆಲ್ಲ ಕಳೆಗುಂದಿ
ನಡುಗುವುವು ಲಯದ ಕೂಪದ ಬದಿಯಲಿ ॥

ಮಾರಮಣ ನೀನು ಕನವರಿಸಿ ನಿಟ್ಟುಸಿರು ಬಿಡೆ
ಪ್ರಲಯಕಾಲದಲಿ ಮೇಲೇಳ್ದ ಝುಂಝೂ
ಮಾರುತನ ಮರುರೂಪು ಜಗವ ಮುತ್ತಲು ಒಣಗಿ
ಎಲೆವೊಲಾಡುವುದು ಅದರಲಿ ಪ್ರಪಂಚಾ ॥

ಸಚ್ಚಿದಾನಂದ ನೀ ಸುಖ ನಿದ್ರೆಯಲಿ ನಿಲಲು
ನಿನ್ನ ಭಾವನೆಯು ಸೊಡರಲುಗದಿರಲು
ಹೆಚ್ಚಿದಾನಂದದಲಿ ಮೂಲೋಕ ನಲಿಯುವುದು
ಧನ್ಯತೆಯ ಹಾಡುವುದು ಅದರ ಕೊರಲು ॥

ಕನವರಿಸದಿರು ನಮ್ಮ ಹೃದಯರಂಗದ ಮಣಿಯೆ
ಕನವರಿಸದಿರು ನಮ್ಮ ಬಾಳ ಧಣಿಯೆ
ಮನದಾಸೆಗಳನೆಲ್ಲ ಕೊಡುವ ರನ್ನದ ಕಣಿಯೆ
ಅಲುಗದಂತಿರು ನಮ್ಮ ಜೀವ ತಣಿಯೆ ॥

ಕೋಲಾಟದ ಗುರು— (ನಾಲ್ವರು ಮಕ್ಕಳೊಂದಿಗೆ ಬಂದು) ಇದು ನಾನು ಇವರಿಗೆ ಕಲಿಸಿರುವ ಕೋಲಾಟ. ಅಪ್ಪಣೆಯಾದರೆ ಆಡಿಸುತ್ತೇನೆ.

ಲೋಕ— ಅಗತ್ಯವಾಗಿ ಆಡಿಸಬೇಕು.

ಮಕ್ಕಳು— (ಕೋಲಾಟ ಆಡುತ್ತಾರೆ)

ಆನಂದ ಭೈರವಿ

ಸಹ್ಯ ಪರ್ವತದ ಶಿಖರದ ಸಾಲು
 ಮುಗಿಲನು ಮುಟ್ಟುವ ತಾಣದಲಿ
ಮೋಡದ ಮೋಹರ ಬ್ರಹ್ಮಗಿರಿಯಲಿ
 ನಿಲುವೆಡೆ ತನ್ನ ಪ್ರಯಾಣದಲಿ,

ಪಡುವಣ ನಾಡಿನ ಆಳ್ದ ಕವೇರನ
 ಕರುಮಾಡದ ಅರಮನೆಯಲ್ಲಿ
ಅಭಿಮಾನದಿ ಕಾವೇರಿ ಉದಿಸುವಳು
 ಜಗಕೆ ಹರುಷ ವರ್ಧನೆಯಲ್ಲಿ.

ಸಪ್ತ ಋಷಿಗಳಾ ಒಡನೆಯೆ ಅವಳನು
ಪುದುವಾಳಿನ್ನುತ ಹರಸುವರು
ದ್ವಿಸಪ್ತ ವನದೇವತೆಗಳಂಕದಲಿ
ಇಟ್ಟು ಸಲಹಿ ಪರಿಚರಿಸುವರು

ಗಿಳಿಕೋಗಿಲೆಗಳ ಮಂಜುಳರಾವದ
ನೆಲೆಮನೆಯಾಗಿಹ ಕಾನನದಿ
ಎಳೆತನವನು ಕಳೆದೆಸೆದು ಕುಮಾರಿ
ಬೆಳೆದು ಕಾಣುವಳು ಮಾನನಿಧಿ

ನಾದನಾಮ ಕ್ರಿಯೆ

ಯಾವ ಲೋಕದ ಯಾವ ದೇವಿಯರೊ
ತಾಯಿ ನೀವು ಕಾವೇರೀ
ದೇವಿಯಾರು ಇನ್ಯಾವ ಕಾರಣ
ಹಾಯು ತಂದಿರೀ ದಾರೀ

ಅರವಿಂದಾಕ್ಷನ ಅರಸಿತಿಯೋ
ಬೊಮ್ಮನ ಪುತ್ಥಳಿ ಸರಸತಿಯೋ
ಮುಕ್ಕಣ್ಣ ಶಿವನ ವರಸತಿಯೋ

ಯಾವ ಲೋಕದ ಯಾವ ದೇವಿಯರೊ
ತಾಯಿ ನಮ್ಮ ಕಾವೇರೀ
ಯಾವ ದೇವರ ಕರುಣೆಯೊ ನೀವು
ಹಾಯು ತಂದಿರೀ ದಾರಿ

ಅರಿಯಿರಿ ಕಂದಾ ಹರಿ ಕರವಿಡಿದ
ಅರಸಿತಿ ಸಿರಿದೇವಿ
ಸರಸದಿ ಪತಿಸಾಗರದಲಿ ಮರೆದಿರೆ
ಅರಸುತ ಹರಿದೇವು

ಕವೇರ ರಾಜನ ಈ ಸುತೆ ಹರಿಯು
ಒಲವಿನ ಸತಿ ಮಾದೇವಿ ಇದರಿಯಾ
ದೇವಾಧಿದೇವ ವಂದಿತ ಚರಣೆ
ಲೋಕಮಾತೆ ಹರಿ ಹೃದಯಾಭರಣೆ

ಆನಂದಭೈರವಿ

ಕೊಡಗಿನ ಹಸುರಿನ
ಚೆಲುವಿನ ಬಸುರಿನ
ಒಲವಿನ ಸುತೆ ಸಿರಿದೇವಿ
ಒಡೆಯನು ಅವಿತೆಡೆ
ಎಡಕಿರೆ ಪಡುಗಡೆ
ಬಲಕೆಯೇಕೆ ಹರಿದೀರಿ ?

ಬ್ರಹ್ಮನ ಗಿರಿಯಲಿ
ನಾ ಕಣ್ತೆರೆಯಲು
ಪಡುವಣ ಮುನ್ನೀರು
ಕಳಕಳ ಮಿಂಚಿತು
ಕರೆಯುತ ಮುಂಚಿತು
ಒಡೆಯನಿಹುದ ಸಾರಿ.

ಬಲಗಡೆ ನೋಡಲು
ಕೊಡಗಿನ ನಾಡಲು
ಹಸುರಿದ್ದುದು ಹೊರತು
ಹರಿದಾರಿಯು ನೆಲ
ನೂರೂ ನಿರ್ಜಲ
ಏಕೆ ಅದರ ಕೊರತೆ.

ಅರಸನ ಹಿಡಿಯುವ
ಸುಖವನು ಪಡೆಯುವ
ಕೆಲಸವಿಹುದು, ಅಂತೇ
ಮಕ್ಕಳ ಕಷ್ಟವ
ಕಳೆವೆನು ಇಷ್ಟವ
ಕೊಡುವೆನೆಂಬ ಹೊಂತು.

ಅದರಿಂದಿತ್ತ
ಬಂದಿರಿ, ಹೆತ್ತ
ಕರುಳಿನ ಚಟದಿಂದ,
ತಾಯಿಗೆ ಮಕ್ಕಳ
ಸುಖವೇ ಹೆಕ್ಕಳ;
ಪೊರೆವಳು ಹಟದಿಂದ.

ಯಾವುದೊ ಕಾರ್ಯಕೆ
ಹೊರಟಳೆ ಪೂರ್ವಕೆ
ಎಂದು ನಾಥನಂದು
ತ್ರಿಜಗದ್ವಂದ್ಯನು
ತಾನೇ ಬಂದನು
ಜೊತೆಗೆ ನಡೆವೆನೆಂದು.

ಸೀನರಸೆಂದ ಪಂಥದ ಸರಸ
ಏನೋ ಆಯಿತು ಅರಸಿದನರಸ;
ಮಕ್ಕಳಿಗಾಗಿ ದುಡಿವಳು ಮಡದಿ
ಎನ್ನುತ ಜೊತೆಯಲೆ ನಡೆದನು ಬಿಡದೆ;
ತೋಳ ತೆಕ್ಕೆಯಲಿ ಸೆರೆಯನು ಬೇಡಿ
ಮೂರೆಡೆ ಪವ್ವಡಿಸಿದನೊಡನಾಡಿ;
ತೊರೆದನು ಹರಿ ವೈಕುಂಠವನಂದು

ತಿರುಪಾಣಿ

ನಾದನಾಮ ಕ್ರಿಯೆ

ಕಾವೇರಿದೇವಿ ವೈಕುಂಠದರಸಿತಿ
ಸಿರಿದೇವಿ ಲಕುಮಿ ರಮಾದೇವಿ;
ಗೆಳತಿಯರಿವಳಿಗೆ ಜಾಣೆ ಸರಸತಿ
ತ್ರಿಪುರಸುಂದರಿ ಉಮಾದೇವಿ

ಲೋಕದಿ ನನ್ನಯ ಮಕ್ಕಳು ಕಷ್ಟವ
ಉಣುತಿಹರಿವರನು ಕಾದೇವು,
ಹಸಿವು ಆಸರನು ಆರಿಸಿ ಇಷ್ಟವ
ಸಲಿಸಿ ಹೊರೆಯುವರೆ ಹೋದೇವು

ಎನ್ನುತ ಸನ್ನುತ ವೈಕುಂಠದುನ್ನತ
ಪೀಠವನುಳಿದು ಜಗನ್ಮಾತೆ
ನೆಲದಲಿ ಹರಿದಳು ಕರುಣೆಯ ಮೆರೆದಳು
ಕ್ಷೀರಾಂಭೋನಿಧಿ ಸಂಜಾತೆ

ಜಯವೆನ್ನಿ ದೇವಿಗೆ ದಿವಿಜಸಂಭಾವ್ಯೆಗೆ
ಜಯವೆನ್ನಿ ಕರುಣಾವಾಹಿನಿಗೆ
ಜಯವೆಂಬ ಹಾಡನ್ನು ಹಾಡಿರಿ ನಾಡನ್ನು
ಪೊರೆಯುವ ಕಾವೇರಿ ಸ್ವಾಮಿನಿಗೆ

ಮಧ್ಯಮಾವತಿ

ಜಯ ಜಯ ಲೋಕದಮಾತೆಗೆ ಜಯ ಜಯ
ಜಯ ತ್ರಿಭುವನ ವಿಖ್ಯಾತೆಗೆ ಜಯ ಜಯ

ಜಯ ಜಯ ರಂಗನರಾಣಿಗೆ ಜಯ ಜಯ
ಜಯ ಜಯ ಮಂಜುಳವಾಣಿಗೆ ಜಯ ಜಯ

ಜಯ ಜಯ ಕವೇರಕನ್ನೆಗೆ ಜಯ ಜಯ
ಸಕಲಸುಗುಣ ಸಂಪನ್ನೆಗೆ ಜಯ ಜಯ

ಜಯ ಜಯ ಜಯ ಜಯ ಜಯ ಜಯ ಜಯ ಜಯ
ಜಯ ಜಯ ಜಯ ಜಯ ಜಯ ಜಯ ಜಯ ಜಯ

(ಲೋಕಸಾರಂಗನು ಶಂಖವನ್ನು ಹಿಡಿದು ನಿಂತಿರುವ ಹಾಗೆಯೇ ಯೋಗ ನಿದ್ರೆಯಲ್ಲಿ ಮುಳುಗುವನು)

ಮಧುರ— (ಆಟದವರಿಗೆ) ಯಜಮಾನರು ಯೋಗನಿದ್ರೆಯಲ್ಲಿ ಮುಳುಗಿದಾರೆ. ಇನ್ನು ನೀವು ನಡೆಯಿರಿ. (ಎಂದು ಅವರನ್ನು ಕಳುಹಿಸಿಕೊಟ್ಟು ಆಳ್ವಾರಿಗೆ) ಯಾವುದಾದರೂ ಮನಸ್ಸಿಗೆ ಒಪ್ಪಿದ ಮಾತುಕತೆ ಕೇಳಿದಾಗ ಇವರು ಈ ರೀತಿ ಸಮಾಧಿಯಲ್ಲಿ ಮುಳುಗುತ್ತಾರೆ. ಒಂದು ಗಳಿಗೆ ಎರಡು ಗಳಿಗೆ ಬಿಟ್ಟು ಎಚ್ಚರಗೊಳ್ಳುತ್ತಾರೆ.

(ಎಂದು ಲೋಕಸಾರಂಗನನ್ನು ಅಲ್ಲಿಯೇ ಕಂಬದ ಬಳಿ ಮಲಗಿಸಿ ಬಳಿಯಲ್ಲಿ ಕುಳಿತುಕೊಳ್ಳುತ್ತಾನೆ.)

ಆಳ್ವಾರ್— ಇವರು ಏಳುವವರೆಗೆ ತಾವು ಇಲ್ಲಿಯೇ ಕುಳಿತಿರುತ್ತೀರೆಂತ ಕಾಣುತ್ತದೆ.

ಮಧುರ— ಹೌದು, ತಾವು ಕಾಯಬೇಕಾದದ್ದಿಲ್ಲ. ಇನ್ನೊಂದು ಗಳಿಗೆಗೆ ಮಧ್ಯಾಹ್ನದ ಸೇವೆ ಆರಂಭವಾಗುತ್ತದೆ. ಅದುವರೆಗೆ ಎಲ್ಲಿಯಾದರೂ ಹೋಗಿದ್ದು ಬರಬಹುದು.

ಆಳ್ವಾರ್— ನದಿಗೆ ಹೋಗಿ ಆಹ್ನಿಕಗಳನ್ನು ಮುಗಿಸಿಕೊಂಡು ಬರುತ್ತೇನೆ.

ಮಧುರ— ಆಗಬಹುದು. (ಆಳ್ವಾರ್ ಹೊರಡುತ್ತಾನೆ.)

ಸ್ಥಾನ ೪

(ಬೀದಿ. ಪಾಣಿ ಹಾಡುತ್ತಿರುತ್ತಾನೆ.)

ಪಾಣಿ—

ಕಾನಡಾ

ಏನಾದರೂ ಸರಿ ತೊರೆಯದಿರೆನ್ನ
ದೀನರಕ್ಷಕಾ ಸೀತೆಯ ರನ್ನ
ಕಾಣೆನೊ ಬೇರೆ ಪೊರೆವರ ನಾನು
ದಾನವಾರಿ ಶ್ರೀರಾಮಚಂದ್ರ

ಕುಲದಲಿ ಹೀನ ಗುಣದಲಿ ಹೀನ
ಮಲಿನ ಮಾನಸನಾಗಿಹೆನು
ಮಲರಗಣ್ಣಾ ನೀ ಎನ್ನ ಪರಿಕಿಸಿ
ಛಲ ಮಾಡಲು ಬದುಕುವೆನೇನೋ

ಕೇಳಿದ ಶಾಸ್ತ್ರವ ನಡೆಯಿಸಲಾರೇ
ಬಾಳುವೆ ಹಸನಾಗದೊ ಎಂತೂ
ಶ್ರೀಲತಾಂಗಿಯರಸಾ ಪತಿತನ
ಪಾಲಿಸು ಉದ್ಧರಿಸೋ ಜತನ

ಏನು ಮಾಡಲೊ ಇನ್ನು ಒರಿಯ ಅಭಿ
ಮಾನದಿಂದ ಹೇ ರಂಗನಾಥಾ
ನೀನುದಾರಿಯಲ್ಲದೆ ಇರೆ ಪಾಣಿ
ಏನಾಗುವನೋ ಬಲ್ಲವರುಂಟೆ

(ಮಧ್ಯೆ ಆಳ್ವಾರ್ ಅಲ್ಲಿ ಬಂದು ಇವನ ಹಾಡನ್ನು ಕೇಳುತ್ತಿದಾನೆ. ಕಾರೀ ದಾಸನೂ ಆ ವೇಳೆಗೆ ಅಲ್ಲಿ ಬಂದು ತಾನೂ ಹಾಡನ್ನು ಕೇಳುತ್ತ ನಿಲ್ಲವನು.)

ಆಳ್ವಾರ್— ಇವರು ಬಹು ಚೆನ್ನಾಗಿ ಹಾಡುತ್ತಾರೆ.

ಕಾರೀ— ಹೌದು ದೇವರು. ಸ್ವಾಮಿ ಪರಸ್ಥಳದವರೇನೊ ?

ಆಳ್ವಾರ್— ಹೌದು. ನಾವು ಕಾಂಚೀಪುರ.

ಕಾರೀ— ಸರಿ. ಇಯಯುವರಿಗೆಲ್ಲ ಇವರ ವಿಷಯ ಗೊತ್ತು. ಮೂವತ್ತು ವರುಷ ಒಂದೇ ಸಮನಾಗಿ ಇಲ್ಲಿ ದೇವರಿಗೆ ಸೇವೆ ಅರ್ಪಿಸಿದಾರೆ. ಈ ಕೃತಿಯೆಲ್ಲ ಇವರೇ ಮಾಡಿದವು. ನಿಂತ ಹಾಗೆಯೇ ಕವನ ಮಾಡುತ್ತಾರೆ.

ಆಳ್ವಾರ್— ಆಹಾ! ಏನಾಶ್ಚರ್ಯ!

ಕಾರೀ— ಅವರಲ್ಲಿ ಆಶ್ಚರ್ಯವಲ್ಲ ಸ್ವಾಮಿ. ಮನಸ್ಸಿನ ಭಕ್ತಿಯೇ ಬಾಯಲ್ಲಿ ಮಾತಾಗುತ್ತದೆ. ಅವರೇನು ಅಲ್ಲೋದಿಲ್ಲ ನೂಲೋದಿಲ್ಲ.

ಆಳ್ವಾರ್— ಹಾಗಾದರೆ ಇವರು ಮಾಡಿದ ಹಾಡೆಲ್ಲ ನಷ್ಟವಾಗಿ ಹೋಗುತ್ತವಲ್ಲ.

ಕಾರೀ— ದೇವರ ಪಾದಕ್ಕಿಟ್ಟ ಹೂವಿನ ಹಾಗೆ. ಒಪ್ಪಿಸಿದ್ದೇ ಪುಣ್ಯ. ಆ ಮೇಲೆ ನಷ್ಟ ಹ್ಯಾಗೆ?

ಆಳ್ವಾರ್— ಅಣ್ಣ ಒಳ್ಳೇ ಮಾತು ಹೇಳಿದಿರಿ.

ಕಾರೀ— ಇವರ ಹಾಡು ಒಂದು ಕೆಲವನ್ನು ಇವರ ಜನ ಕಲಿತು ಹಾಡಿದಾರೆ. ನಮ್ಮವರೂ ಒಂದೆರಡು ಹಾಡುವುದು ಉಂಟು. ಮಧುರ ಸ್ವಾಮಿಯವರು ಇಲ್ಲಿ ಇದ್ದು ಒಂದು ಸಲ ಕೇಳಿದರೆ ಮತ್ತೆ ಬಾಯಲ್ಲಿ ಹೇಳುವರು.

ಆಳ್ವಾರ್— ಇನ್ನೂ ಹೆಚ್ಚು ಜನ ಕಲಿಯಬಾರದೆ?

ಕಾರೀ— ಇವರು ಅಂತ್ಯಜರು. ಇವರು ಮಾಡಿದ್ದನ್ನು ಜಾತೀ ಜನ ಕಲಿಯೋದೇ ಎಂತ ಮುಕ್ಕಾಲು ಪಾಲು ಜನ ಹಿಂತೆಗೆಯುತ್ತಾರೆ.

ಆಳ್ವಾರ್— ಇವರು ಅಂತ್ಯಜರಲ್ಲವೆ? ಹೌದು, ಮಧುರಸ್ವಾಮಿ ಹಾಗೆಂದು ಹೇಳಿದರು.

ಕಾರೀ— ಹೌದು, ಆದರೂ ಇವರು ಮಾಡಿದ ಹಾಡನ್ನು ದೇವಸ್ಥಾನದಲ್ಲಿ ಹಾಡಿದ್ದು ನಾನು ಕೇಳಿದೇನೆ. ಇವರ ಹೆಸರು ಪಾಣಿ ಎಂತ.

ಇವರು ಒಂದೊಂದು ಸಲ ಅಂಕಿತ ಹಾಕುತ್ತಾರೆ. ಒಂದೊಂದು ಸಲ ಹಾಕೋದಿಲ್ಲ. ಹಾಕಿದ ಹಾಡಿನಲ್ಲಾದರೆ ಜನ ಅದನ್ನ ಪ್ರಾಣಿ ಅಂತ ಹೇಳಿ ಹಾಡುತ್ತಾರೆ. ಅನೇಕ ಜನರಿಗೆ ಅದು ಇವರದು ಎಂತ ತಿಳಿಯೋದಿಲ್ಲ.

ಪಾಣಿ—

ಈರೇಳು ಲೋಕಗಳ ಆಂತರ್ಯದಿರವೇ
ನೀನಾಗಿ ನಿಂದಿರುವೆ ಹೇ ಪರಾತ್ಪರವೇ
ಎಲ್ಲ ಚೇತನಗಳೊಳಗನು ಬೆಳಗುವರಿವೇ
ನಿನ್ನ ನಿತ್ಯದ ರೂಪು ಹೇ ಪರಾತ್ಪರವೇ

(ಆಳ್ವಾರ್ ಮುಂದೆ ಹೊರಡುವನು. ಕಾರಿ ಅಲ್ಲಿಯೇ ಇರುವನು)

ಸೃಷ್ಟಿಯಲಿ ವೈವಿಧ್ಯ ಈ ಚರಾಚರವೇ
ನಿನ್ನ ನಿಜದ ಕುಟುಂಬ ಹೇ ಪರಾತ್ಪರವೇ
ಎಲ್ಲವನು ನೀನು ಕನಿಕರದಿಂದ ಪೊರೆವೇ
ಇದು ನಿನಗೆ ಬಹು ಸುಲಭ ಹೇ ಪರಾತ್ಪರವೇ
ಕಿರಿದರಲಿ ಕಿರಿದೆಂಬ ಬಾಳಿನೊಂದಿರುವೇ
ನಿನಗೆ ಕಿರಿದಲ್ಲದಿದೆ ಹೇ ಪರಾತ್ಪರವೇ
ಮೇರೆಯನು ಕಾಣದೀ ಭೂಮಿಸಾಗರವೇ
ನಿನಗೆ ಒಂದಡಿಯಾಯ್ತು ಹೇ ಪರಾತ್ಪರವೇ
ಮನವ ನಿಲುಕದ ಕೊನೆಯ ಆಗಸದ ಹರವೇ
ಇನ್ನೊಂದು ಅಡಿ ನಿನಗೆ ಹೇ ಪರಾತ್ಪರವೇ
ಕಾಂಬಕಾಣದ ವಿಶ್ವತತಿಯನು ವಿವರವೇ
ಇಲ್ಲದೊಲು ತುಂಬಿರುವೆ ಹೇ ಪರಾತ್ಪರವೇ
ನಿನ್ನ ಮಹಿಮೆಯ ತೆರನ ಹೊಗಳುವರೆ ತರವೇ
ನನ್ನಂಥ ಮಾನವಗೆ ಹೇ ಪರಾತ್ಪರವೇ
ಎನ್ನ ಮನದಲಿ ನಿನ್ನ ಮನೆಯ ಮಾಡಿರುವೇ
ನಿನ್ನದೀ ಬಾಳೆಂದು ಹೇ ಪರಾತ್ಪರವೇ

ನನ್ನ ಚೇತನದ ವರ್ತನದೆಲ್ಲ ಹರಿವೇ
ನಿನ್ನ ಕುರಿತೋಡುತಿದೆ ಹೇ ಪರಾತ್ಪರವೇ
ಒಮ್ಮೆ ಮೊಗದೋರಿ ಮತ್ತೆ ಅದೇಕೆ ಮರೆವೇ
ಬಾಳಲಾರೆನೊ ಇಂತು ಹೇ ಪರಾತ್ಪರವೇ

(ಅರ್ಚಕನೊಬ್ಬನು ದೇವಸ್ಥಾನದಿಂದ ಕೊಡದೊಂದಿಗೆ ಬರುತ್ತಾ)

ಅರ್ಚಕ— ಯಾರೋ ಅಲ್ಲಿ . . . .

ಪಾಣಿ— ಸ್ವಾಮಿ ತಪ್ಪಾಯಿತು (ಎಂದು ದಾರಿಬಿಡುತ್ತಾ ಮತ್ತೆ)

ತಿಳಿವ ಮರೆಸಿಹ ಪರೆಯನೆಂದಿಗೆ ತೆರೆವೇ
ಎಂದಿಂಗೆ ಎಂದಿಂಗೆ ಹೇ ಪರಾತ್ಪರವೇ

ಬಾಳೆನ್ನದೆಂದು ಹೆಸರಕ್ಕರವ ಬರೆವೇ
ಬರೆದು ಅಳಿಸುತಲಿರುವೆ ಹೇ ಪರಾತ್ಪರವೇ

ಬರೆದು ಅಳಿಸದ ತೆರದೊಳೆಂದಿಂಗೆ ನೆರೆವೇ
ಮರಳ ಮನವನು ನೆನೆಸಿ ಹೇ ಪರಾತ್ಪರವೇ

ಭಕ್ತ ಹೃತ್ ಕಮಲವನಚಾರಿ ಭಂಭರವೇ
ಭಕ್ತನೆಂದೆನ್ನ ಪೊರೆ ಹೇ ಪರಾತ್ಪರವೇ

ಅಗಲಿಯೂ ನೋಯದಿರೆ ನಾನೇನು ತರುವೇ
ಅರಿವಿತ್ತವನೆ ಸಲುಹು ಹೇ ಪರಾತ್ಪರವೇ

ಎನ್ನೆಲ್ಲ ಜನ್ಮಗಳ ತಾಯ್ತಂದೆ ಗುರುವೇ
ಇನ್ನೆಲ್ಲಿ ಬೇಡಲ್ಕೆ ಹೇ ಪರಾತ್ಪರವೇ

ನಾ ದೋಷಿ ಪಾಪಿಯೆಂದೇನು ಬೇಸರವೇ
ಕ್ಷಮೆಯಬುಧಿ ಬತ್ತಿತೇ ಹೇ ಪರಾತ್ಪರವೇ

ಕಾಲ ಬರಲೆಲ್ಲವನು ನೀ ಮರೆಗೆ ಕರೆವೇ
ಕರುಣಾಳು ಕೊನೆಯ ನೆಲೆ ಹೇ ಪರಾತ್ಪರವೇ

ಎನ್ನ ಎಂದಿಂತು ನೀ ಪತಿಕರಿಸಿ ಪೊರೆವೇ
ಬಾಳ ಹೊನಲಿನ ಶರಧಿ ಹೇ ಪರಾತ್ಪರವೇ
ಹೇ ಪರಾತ್ಪರವೇ........

(ಎಂದು ಧ್ಯಾನದಲ್ಲಿ ನಿಲ್ಲುವನು. ಅರ್ಚಕನು ನದಿಯು ಕಡೆಯಿಂದ ಕೊಡದಲ್ಲಿ ನೀರು ತುಂಬಿಕೊಂಡು ಬರುವನು)

ಅರ್ಚಕ— ಯಾರೋ ದಾರಿಯಲ್ಲಿ. ನಾರಾಯಣ ಇವರ ಸಂಗಡ ಒಳ್ಳೇ ವ್ಯಾಪಾರ ಆಯಿತಲ್ಲಪ್ಪಾ ದಾರಿಗಾಗಿ. ಏ ಯಾರೋ ಅಲ್ಲಿ.... (ಪಾಣಿ ಇದ್ದಲ್ಲಿಯೇ ಇರುವನು) ಅಯ್ಯೋ ಒಳ್ಳೇ ಗ್ರಹಚಾರವಾಯಿತಲ್ಲ (ಎಂದು ಒಂದು ಕಲ್ಲನ್ನು ತೆಗೆದುಕೊಂಡು ಪಾಣಿಯ ಕಡೆಗೆ ಎಸೆಯುವನು) ಅದು ಅವನ ತಲೆಗೆ ತಗುಲಿ ಗಾಯಮಾಡುವುದು. ಪಾಣಿಗೆ ನೆನವಿಲ್ಲ. ಅವನು ಹಾಗೆಯೇ ಕೆಳಗೆ ಬೀಳುವನು. ಅರ್ಚಕನು ದೇವಾಲಯದ ಕಡೆಗೆ ನಡೆಯುವನು.

ಕಾರೀದಾಸ— ಎಲ ಎಲ ಅಪಾಯವಾಯಿತಲ್ಲ. ಯಾರನ್ನಾದರೂ ಕರೆಯುವ (ಎಂದು ಹೋಗುವನು.)

ಸ್ಥಾನ ೫

ಲೋಕಸಾರಂಗನು ಸಮಾಧಿಯಲ್ಲಿ ಮಲಗಿರುವ ಸ್ಥಳ; ಮಧುರ ಕುಳಿತಿದಾನೆ. ಆಳ್ವಾರ್ ಬರುತ್ತಾನೆ.

ಆಳ್ವಾರ್— ಇನ್ನೂ ಯಜಮಾನರು......

ಮಧುರ— ಮೆಲ್ಲನೆ ಮಾತನಾಡಿ (ಎಂದು ಸನ್ನೆಮಾಡುತ್ತಾನೆ)

ಆಳ್ವಾರ್— ಇನ್ನೂ ಸಮಾಧಿಯಲ್ಲಿಯೇ ಇದಾರೆ.

ಮಧುರ— ಹೌದು.

ಆಳ್ವಾರ್— ಒಳಗೆ ಕೆಲಸ ?

ಮಧುರ— ಅದು ಎಂದಿನಂತೆ ನಡೆಯುತ್ತಿರುತ್ತದೆ. ಅವರು ಸಮಾಧಿಯಲ್ಲಿರುವಾಗಲೂ ಆಗುವುದು ಹೋಗುವುದೆಲ್ಲ ಅವರಿಗೆ ತಿಳಿಯುತ್ತಲೆ ಇರುತ್ತದೆ. ತಾವು ಒಳಗೆ ಹೋಗಿ ದೇವರ ಸೇವೆ ಮಾಡಿಕೊಂಡು ಬರಬಹುದು.

(ಆಳ್ವಾರ್ ಒಳಗೆ ಹೋಗುವನು)

ಮಧುರ— (ಮೆಲ್ಲನೆ ಪದ್ಯಗಳನ್ನು ಹೇಳುವನು)

ಚಾಂದಳವೆ ಹಣತಿ ನಕ್ಷತ್ರವೇ ಜ್ಯೋತಿ
ನಾನೆ ಎಡೆ ನಿನಗೆ ಒಡೆಯಾ ನನ್ನ ಗುರುವೇ
ಇವ ಮೂರ ನೀಡಿ ಪೂಜಿಸುವೆನೋ ನಾ ನಿನ್ನ
ರಕ್ಷಕ ಪರಂಜ್ಯೋತಿ ಹೇ ಪರಾತ್ಪರವೇ

ಆತ್ಮವೇ ಹಣತಿ ಅರಿವೆಂಬುದೇ ಜ್ಯೋತಿ
ಒಳಗಣಾನಂದ ನಿನಗೆಡೆ ಒಡೆಯ ಗುರುವೇ
ಇವನು ಪಾದದೊಳಿರಿಸಿ ಪೂಜಿಸುವೆನೋ ನಿನ್ನ
ಸಚ್ಚಿದಾನಂದ ಅಚ್ಯುತ ಪರಾತ್ಪರವೇ

(ಲೋಕಸಾರಂಗನು ಸ್ವಪ್ನದಲ್ಲಿ ಒರಲುವಂತೆ ಒರಲಿ ಬೆಚ್ಚಿ ಬೀಳುವನು)

ಮಧುರ— (ಅವನನ್ನು ಹಿಡಿದು ಮಗುವನ್ನು ತಟ್ಟುವಂತೆ ತಟ್ಟುತ್ತ) ಇದೇನು ಇದು ಎಂದೂ ಇಲ್ಲದ್ದು ! (ಎಂದು ಕ್ಷಣ ಬಿಟ್ಟು)

ಜಗವನುಂಡ ಹಿರಿಬಾಯಾ ಸೋಲರಿಯದ ಕೀರ್ತಿಯರಸಾ
ನಿಲು ಸೊಡರ ಹೊಗರ ಚೆಲುವಮೂರುತಿ ದಾಸನುಸಿರ ಒಳಉಸಿರಾ
ಜಗದ ತಿಲಕವಾಗಿ ನಿಂದತಿರುವೇಂಗಡದೆನ್ನೊಡೆಯಾ
ಜೀತದ ಬಳಿಯಾತನೆನಗೆ ತೋರು ಅಡಿಯ ಸಾರ್ವಪರಿಯಾ ॥

ಲೋಕ— ಅಬ್ಬ (ಎಂದು ನಿದ್ದೆಯಿಂದ ಏಳುವನು.)

ಮಧುರ— ಏನಾಯಿತು ?

ಲೋಕ— (ಕುಳಿತು) ದೇವರಿಗೆ ಆಗ್ರಹವುಂಟಾಗಿದೆ. ನಿನ್ನ ಸೇವೆ ನನಗೆ ಬೇಡ ಎಂದರು.

ಮಧುರ— ಏಕಂತೆ ?

ಲೋಕ— ತನ್ನ ಭಕ್ತನು ಬಿಸಿಲಲ್ಲಿ ನಿಂತಿದಾನಂತೆ. ನಮ್ಮವರು ಯಾರೋ ಅವನನ್ನು ಕಲ್ಲಿನಿಂದ ಹೊಡೆದರಂತೆ. ಹೋಗಿ ಅವನನ್ನು ಕರೆದು ಕೊಂಡು ಬಂದರೆ ಸರಿ, ಇಲ್ಲದಿದ್ದರೆ ನಾನಿಲ್ಲಿರುವುದಿಲ್ಲ, ನನಗೆ ನಿಮ್ಮ ಸೇವೆ ಬೇಡ ಎಂದರು.

ಮಧುರ— ಈಗ ಏನು ಮಾಡುತೀರಿ ?

ಲೋಕ— ನಿನ್ನ ಭಕ್ತನನ್ನು ನಿನ್ನಲ್ಲಿಗೆ ಕರತರುತ್ತೇನೆ, ಇದಕ್ಕೆ ಆಗ್ರಹ ವೇಕೆ, ತಪ್ಪನ್ನು ಮನ್ನಿಸಬೇಕು ಎಂದು ಎಚ್ಚತ್ತೆ. ಜನರನ್ನು ಕರೆ, ಭಕ್ತನನ್ನು ಮರ್ಯಾದೆಯಿಂದ ಕರೆತರೋಣ.

ಮಧುರ— ಭಕ್ತನು ಯಾರೆಂದು ನೋಡ ಹೇಳಲೆ ?

ಲೋಕ— ನೋಡುವುದು ಏನು ? ಭಕ್ತನು ಬಿಸಿಲಲ್ಲಿದಾನೆ. ನಮ್ಮವರು ಅವನನ್ನು ಕಲ್ಲಿನಿಂದ ಹೊಡಿದಿದಾರೆ, ಅವನನ್ನು ಕರೆದುಕೊಂಡು ಬರಬೇಕು.

(ಆ ವೇಳೆಗೆ ಅರ್ಚಕರಿಬ್ಬರೂ ಆಳ್ವಾರೂ ಬರುವರು)

ಅರ್ಚಕ— ಯಜಮಾನರು ಸ್ವಲ್ಪ ಗರ್ಭಗುಡಿಯ ಬಳಿ ಬರಬೇಕು. ನಾವು ಒಳಹೊಗುವುದಕ್ಕಾಗುವುದಿಲ್ಲ.

ಮಧುರ— ಏಕೆ ಏನಾಗಿದೆ ?

ಅರ್ಚಕ— ಆದಿಶೇಷನಿಗೆ ಉಸುರು ಬಂದಂತೆ ಕಾಣುತ್ತಿದೆ ಗುಡಿಯಲ್ಲಿ ಬಿಸಿ ಬಿಸಿ ಗಾಳಿ. ಒಳಗೆ ಅಡಿಯಿಡಲಾಗಲಿಲ್ಲ.

ಇನ್ನೊಬ್ಬ— ಹಾಗೂ ನೋಡೋಣವೆಂದು ಒಳಗೆ ಹೋದೆ. ಯಾರೋ ದೂಡಿದಂತಾಯಿತು. ತಲೆ ತಿರುಗಿ ಹೊರಕ್ಕೆ ಬಿದ್ದೆ.

ಆಳ್ವಾರ್— ಗರ್ಭಗುಡಿಯ ಹತ್ತಿರ ಹೋಗಲೂ ಆಗುವುದಿಲ್ಲ. ಇದು ನಿಜ.

ಲೋಕ— ಇನ್ನು ಸಂದೇಹವೇ, ಸ್ವಾಮಿ, ಎಲ್ಲರನ್ನೂ ಕರೆದುಕೊ ನಡೆ.

ಮಧುರ— ದೇವರ ಭಕ್ತನೊಬ್ಬನನ್ನು ನಮ್ಮವರು ಯಾರೋ ಕಲ್ಲಿನಿಂದ ಹೊಡೆದರಂತೆ. ಅವನು ಬಿಸಿಲಲ್ಲಿ ಬಿದ್ದಿದ್ದಾನಂತೆ. ಅವನನ್ನು ಕರೆದುಕೊಂಡು ಬನ್ನಿರೆಂದು ದೇವರ ಅಪ್ಪಣೆಯಾಗಿದೆ. ಎಲ್ಲ ನಡೆಯಿರಿ.

ಅರ್ಚಕರು— ಅಪ್ಪಣೆ.

ಮಧುರ— ಯಾರು ಕಲ್ಲಿನಿಂದ ಹೊಡೆದವರು ?

ಅರ್ಚಕರು— ನಾವೇಕೆ ಕಲ್ಲಿನಿಂದ ಹೊಡೆದೇವು.

ಇನ್ನೊಬ್ಬ— ನಾವು ದೇವಸ್ಥಾನದಿಂದ ಹೊರಗೆ ಹೋಗಿರಲಿಲ್ಲ. ತಿರುವೇಂಗಡ ಹೋಗಿದ್ದ, ಅವನೇನಾದರೂ ಹೊಡೆದಿರಬಹುದು. ಅವನದು ಯಾವಾಗಲೂ ಸ್ವಲ್ಪ ದುಡುಕು.

ಮಧುರ— ಏಳಿ ನಡೆಯಿರಿ. ಕಲಶ ಕನ್ನಡಿ ತೆಗೆಯಿಸಿಕೊಳ್ಳಿ. ವಾದ್ಯಗಾರರು ಜೊತೆಗೆ ಬರಲಿ.

(ಎಲ್ಲ ಹೊರಡುವರು)

ಲೋಕ— (ರಂಗನಾಥನ ಕಡೆಗೆ ಅಡ್ಡ ಬಿದ್ದು) ನಿನ್ನ ಅಪ್ಪಣೆಯಂತೆ ನಡೆಯುತ್ತೇವೆ. ನೀನು ಆಗ್ರಹ ಮಾಡಬೇಡ, ದೇವಾ ಕಾಪಾಡು.

ಸ್ಥಾನ ೬

ಬೀದಿ. ತಿರುಪಾಣಿ ಎಚ್ಚತ್ತು ನಿಂತುಕೊಂಡಿದಾನೆ. ತಲೆಯಿಂದ ಸ್ವಲ್ಪ ರಕ್ತ ಸೋರುತ್ತಿದೆ.

ನಿನ್ನ ಕೈಂಕರ್ಯದಲಿ ತೊಡಗಿಹರ ದಾರಿಯಲಿ
ನಿಂದು ಸೇವೆಗೆ ಅಡ್ಡಿಯಾದೆನಿದು ತಪ್ಪು

ನಿನ್ನ ಕಿಂಕರನ ಮನ ರೋಸುವಂದದಿ ಮಾಡಿ
ಭಾಗವತಹೃದಯವನು ಕಲಕಿದದು ತಪ್ಪು

ಎಲ್ಲೆಡೆಯೊಳಿಹೆನೆನ್ನ ಒಂದೆಡೆಯೊಳರಸದಿರು
ಎಂದು ನೀನರಿಯಿಸಿರೆ ಒಪ್ಪೆನದು ತಪ್ಪು

ಎನಿತು ಜನ್ಮಗಳ ಸೇವೆಯನು ಎಸಗಿದ ಮೇಲೆ
ಬರುವ ಭಕ್ತಿಯನಿಂದೆ ಬಯಸಿದೆನು ತಪ್ಪು

ತಡೆಯೊ ತಮ್ಮಾ ಎಂದು ಹಿರಿಯರಿಂ ನುಡಿಸಿದರು
ನನ್ನನೀಗಳೆ ಒಪ್ಪು ಎಂದೆನದು ತಪ್ಪು

ಅಭಿಮಾನಿ ಕಾರುಣ್ಯಮೂರ್ತಿ ಪೊರೆವರೆ ನೀನು
ಹಾತೊರೆಯುತಿಹೆ ಇದನು ಮರೆದೆನಿದು ತಪ್ಪು

ಎಲ್ಲಿರಲಿ ಎಂತಿರಲಿ ನಿನ್ನ ಕರುಣೆಯ ಹಸ್ತ
ತುಡುಕಿ ಪೊರೆವುದು ಇದನು ಮರೆದೆನಿದು ತಪ್ಪು

ಬಾಳ್ವೆಯೆಲ್ಲವು ತಪ್ಪು ಮನ್ನಿಸೋ ರಂಗಾ
ಅಳಿಸಿ ನಗಿಸುವ ತಾಯಿ ಹೇ ಚೆಲುವ ಸಿಂಗಾ

(ದೇವಸ್ಥಾನದಿಂದ ಲೋಕಸಾರಂಗನೂ ಜೊತೆಯ ಜನರೂ ಬರುವರು)

ಲೋಕ— ಬೀದಿಯಲ್ಲಿ ಪಾಣಿ ಹೊರತು ಯಾರೂ ಇಲ್ಲ. ಬಿಸಿಲಲ್ಲಿ ನಿಂತಿರುವ ಭಕ್ತನೆಂದರೆ ಈತನನ್ನೇ ಕುರಿತಿರಬೇಕು.

ಮಧುರ— ಈತನ ತಲೆಯಿಂದ ರಕ್ತ ಸೋರುತ್ತಿದೆ. ನಮ್ಮವರು ಯಾರೋ ಈತನನ್ನು ಹೊಡೆದಿರಬೇಕು.

ಆಳ್ವಾರ್— ಈತನು ಅಂತ್ಯಜನೆಂದು ಹೇಳಿದಿರಲ್ಲವೆ?

ಮಧುರ— ಹೌದು.

ಆಳ್ವಾರ್— ಈತನೇ ಆ ಭಕ್ತನಾದರೆ......

ಲೋಕ— ಕರೆದು ತರುತ್ತೇನೆಂದು ನಾನು ಮಾತು ಕೊಟ್ಟಿದೇನೆ. ಕರೆದು ಕೊಂಡು ಹೋಗುವುದೇ ನಿಜ.

ಮಧುರ— ಇವರನ್ನು ನಮ್ಮವರು ಹೊಡೆದರೇ ವಿಚಾರಿಸೋಣವೆ?

ಅರ್ಚಕ— ಹೌದು, ತಿರುವೇಂಗಡ ಬಂದರು. ಅವರು ನದಿಯಿಂದ ಬರುತ್ತಿರುವಾಗ ಈತ ದಾರಿಗೆ ಅಡ್ಡವಿದ್ದರಂತೆ. ಕೋಪದಿಂದ ಕಲ್ಲೆಸೆದರಂತೆ. ಪಾಣಿಗೆ ಹಣೆಯ ಮೇಲೆ ಗಾಯವಾಗಿದೆ.

ಲೋಕ— (ಜೊತೆಯವರ ಕಡೆಗೆ ತಿರುಗಿ ಕೈಮುಗಿದು) ಗೋಷ್ಠಿಯ ಮಹನೀಯರು ನನ್ನ ವಿಜ್ಞಾಪನೆಯನ್ನು ಲಾಲಿಸಬೇಕು. ನನಗೆ ದೇವೇಶನು ಮಾಡಿದ ಅಪ್ಪಣೆ ಇದು. ತನ್ನ ಭಕ್ತ ಬಿಸಿಲಲ್ಲಿ ನಿಂತಿದಾನೆ, ನನ್ನವರಿಂದ ಗಾಯ ಪಟ್ಟಿದಾನೆ, ಅವನನ್ನು ದೇವಾಲಯಕ್ಕೆ ಕರೆತರಬೇಕು ಎಂದು. ಪಾಣಿಯವರನ್ನು ನಾನು ಬಲ್ಲೆ. ರಂಗನಾಥನು ಅಪ್ಪಣೆ ಮಾಡಿದ್ದು ಈತನನ್ನು ಕುರಿತೇ. ಈ ವಿಚಾರದಲ್ಲಿ ನನಗೆ ಸಂದೇಹವಿಲ್ಲ. ಈತನನ್ನು ಆಲಯಕ್ಕೆ ಕರೆದುಕೊಂಡು ಹೋಗಿ ದೇವರ ಇಷ್ಟವನ್ನು ಸಲಿಸಬೇಕೆಂದು ನನ್ನ ಅಪೇಕ್ಷೆ. ಇದಕ್ಕೆ ಮಹನೀಯರು ಅಪ್ಪಣೆ ಕೊಡಬೇಕು.

(ಯಾರೂ ಮಾತನಾಡುವುದಿಲ್ಲ)

ಲೋಕ—ಏಕೆ ಯಾರೂ ಅಪ್ಪಣೆ ಮಾಡುವುದಿಲ್ಲ.

ಮಧುರ— ನಿಮಗೆ ಅಪ್ಪಣೆ ಮಾಡುವೆವೆಂದು ಇಲ್ಲಿ ಯಾರು ಹೇಳುವರು. ನೀವು ಬಲ್ಲವರು. ಇನ್ನೆಲ್ಲರೂ ನಿಮ್ಮ ಅಪ್ಪಣೆಯಂತೆ ನಡೆಯುವವರು.

ಲೋಕ— ಇದು ಸರಿಯೇ ?

ಎಲ್ಲರೂ— ಸರಿ. ನ್ಯಾಯದ ಮಾತು.
ನಿಮ್ಮಂತೆ ನಾವು.

ಲೋಕ— ಜಯ ರಂಗನಾಥ, ರಂಗೇಶ, ರಂಗಮಣೀ,
ಜಯ ಭಕ್ತವತ್ಸಲಾ, ಜಯ ಪತಿತಪಾವನಾ
(ಎಂದು ದೇವಾಲಯದ ಕಡೆಗೆ ಕೈಮುಗಿದು, ಪಾಣಿಯನ್ನು ಕುರಿತು)
ಭಾಗವತರೇ ರಂಗನಾಥನು ತಮ್ಮನ್ನು ಆಲಯಕ್ಕೆ ಕರತರ ಬೇಕೆಂದು ಅಪ್ಪಣೆ ಮಾಡಿದಾನೆ. ಬಿಜಮಾಡಬೇಕು.

ಪಾಣಿ— (ಚಕಿತನಾಗಿ) ಇನ್ನು ಯಾರಾದರೂ ಹೇಳಿದ್ದರೆ ಇದು ಅಪಹಾಸ್ಯ ವೆನ್ನುತ್ತಿದ್ದೆ. ತಾವು ಹೇಳುತಿದೀರಿ ನಿಜವಿರಬೇಕು. ಆದರೆ ಪ್ರತಿಷ್ಠೆಯಾದಂದಿನಿಂದ ಇದುವರೆಗೆ ಅಂತ್ಯಜರು ಪ್ರವೇಶಿಸದ ಆಲಯದೊಳಕ್ಕೆ ನಾನು ಈ ದೇಹವನ್ನು ಹೇಗೆ ತರಲಿ ?

ಲೋಕ— ನೀವು ತರುವುದು ಬೇಡ. ನಾನು ತೆಗೆದುಕೊಂಡು ಹೋಗು ತ್ತೇನೆ. ಹನುಮಂತನ ಭುಜವನ್ನೇರಿದ ಲಕ್ಷ್ಮಣನಂತೆ ಈ ಪಾಮ ರನ ಭುಜವನ್ನೇರಿ ದೈವಸಾನ್ನಿಧ್ಯಕ್ಕೆ ಬಿಜಮಾಡಿಸಬೇಕು.

ಪಾಣಿ— ಮಹಾಪರಾಧವಾದೀತು, ಮನ್ನಿಸಿ; ಈ ಆತ್ಮಕ್ಕೆ ವೈಕುಂಠ ದೊರೆತರೆ ಸಾಕು, ದೇಹಕ್ಕೆ ಬೇಡ.

ಲೋಕ— ಭಗವಂತನ ಅಪ್ಪಣೆಯಾಯಿತು, ತಮ್ಮನ್ನು ಕರೆದುಕೊಂಡು ಬರಬೇಕೆಂದು. ಕರೆತರುವೆನೆಂದು ನಾನು ಮಾತುಕೊಟ್ಟೆ. ಅನು ಗ್ರಹಿಸಬೇಕು. ಭಾಗವತರೆಲ್ಲ ಬಿಸಿಲಲ್ಲಿ ಕಾದಿದಾರೆ.

ಪಾಣಿ— ಈ ಅಪ್ಪಣೆಯ ಮಾತನ್ನು ನಾನು ಹೇಗೆ ಒಪ್ಪಲಿ ?

ಲೋಕ— ದಯಮಾಡಿ ನಮ್ಮನ್ನು ಉದ್ಧರಿಸಬೇಕು. (ಎಂದು ಪಾಣಿಯನ್ನು ಹಿಡಿಯಲು ಹೋಗುವನು.)

ಪಾಣಿ— (ಕೈಮುಗಿಯುತ್ತ ಹಿಂದಹಿಂದಕ್ಕೆ ಹೋಗುತ್ತ) ಹೀಗೆ ಮಾಡಬಾರದು ಅಪಚಾರವಾಗುತ್ತದೆ.

ಲೋಕ— (ಹೋಗಿ ಅವನನ್ನು ಹಿಡಿದುಕೊಂಡು ಬೆನ್ನಿನ ಮೇಲೆ ಕೂರಿಸಿಕೊಂಡು)
ಕೇಳಿಲ್ಲವೇ ನೀವು

ಹಿರಿತನದ ಹೆಮ್ಮೆ ಅವನಲಿ ಒಳ್ಳಿತಲ್ಲಾ
ಕಿರಿತನದ ಹೀನಾಯ ನಿನಗೆ ಸಲ್ಲಾ
ಹರಿಯ ನೆನೆಯುವ ಮನವೆ ವೈಕುಂಠವೆನಲಾಗಿ
ಸರಿಯಾದರಲ್ಲವೇ ಭಕ್ತರೆಲ್ಲಾ

ಜಯ ಜಯ ಜಗನ್ನಾಥ ಜಯ ಪತಿತಪಾವನಾ
ಜಯ ಭಕ್ತವತ್ಸಲಾ ಜಯ ರಂಗಧಾಮಾ

(ಎಲ್ಲರೂ ಚಪ್ಪಾಳೆ ತಟ್ಟುವರು. ಜಯಘೋಷ ಮಾಡುವರು. ಲೋಕಸಾರಂಗನು ಪಾಣಿಯೊಡನೆ ದೇವಾಲಯಕ್ಕೆ ನಡೆಯುವನು. ಎಲ್ಲ ಹಿಂದೆ ನಡೆಯುವರು.)

ಸ್ಥಾನ ೭

ಆಲಯದಲ್ಲಿ ದೇವರ ಮುಂದೆ ಲೋಕಸಾರಂಗ, ಪಕ್ಕದಲ್ಲಿ ಪಾಣಿ. ಸುತ್ತ ಭಕ್ತರು.
ಅರ್ಚಕನು ದೇವರಿಗೆ ಆರತಿ ಮಾಡುತ್ತಿದ್ದಾನೆ. ಅದಾದ ಮೇಲೆ

ಪಾಣಿ—

ಅಮಲನಾದಿ ಹಿರಿಯ ತನ್ನ ಜನಕೆ ನನ್ನನಾಳಗೆಯ್ದ
ವಿಮಲನಡಿಯ ದೇವರೊಡೆಯ ನನ್ನ ರಂಗಧಾಮನಡಿಯ
ಕಮಲ ಎನ್ನ ಕಣ್ಣ ಹೊಕ್ಕು ಇಂದು, ಎದೆಯ ತಣಿಸುತಿಹುವು;
ಅಮಮ ನನ್ನ ಕುರಿತು ಇವನ ಕರುಣೆಯೆನಿತು ಕಂಡೆನೇ ॥

ಅರಿಯದಾಳದಬುಧಿಯನೇ ಅಗಳುಮಾಡಿ ಮೆರೆದ ಲಂಕೆ
ಕೊರಗುವಂತೆ ಕೂರಲಗನು ಎಚ್ಚರಾಯ ಕಾಕುತ್ಸ್ಥನ
ಪರಮೆ ಮಧುರವಾಗಿ ಹಾಡೆ ಗಿಳಿಗಳುಲಿಯೆ ನವಿಲು ಕುಣಿವ
ಸಿರಿಯ ರಂಗಧಾಮದರಸು ದೇವನೆದೆಯ ಕಂಡೆನೇ ॥

ಹಿಂದಿನಿಂದ ಬೆಳೆದು ಬಂದು ಬಾಳಕಾಲ ಸುತ್ತಿಕೊಂಡು
ಮುಂದೆ ನಡೆಯೆ ಬಿಡದೆ ಹಿಡಿದ ಕರ್ಮಲತೆಯ ಬೇರ ಕೊಯ್ದು
ಒಂದಿನಿಸೂ ತಪವ ಕಾಣದೆನ್ನ ಮನವ ಮನೆಮಾಡಿದ
ಮಂದಹಸಿತ ಸುಂದರಮುಖ ರಂಗನ ನಾ ಕಂಡೆನೇ ॥

ಇತ್ತ ಚಕ್ರ ಇತ್ತ ಶಂಖ ತೋಳಗೆ ಶೇಷಶಾಯಿಯಾಗಿ
ಸುತ್ತ ಹರಿವ ಕಾವೇರಿಯ ನೀರೊಳೊಲೆವ ಕಮಲದಿಂದ
ಚಿತ್ತವನೇ ಕಳುವ ಚೆಲುವಮಾಟದ ರಂಗದಲಿ ನೆಲಸಿ
ತೆತ್ತಿಗರಸು ಪೊರೆಯುತಿಹನ ಮುದ್ದು ಬಾಯ ಕಂಡೆನೇ ॥

ತುಳಸಿಯ ನರುಗಂಪಮಾಲೆ ಮೂರ ಹೊತ್ತ ಮಂಗಳಾಂಗ
ವಿಳಸಿತ ಕುಂಕುಮತಿಲಕಾಲಂಕೃತ ಕಸ್ತೂರಿ ರಂಗ
ಕಲಕಲ ನಿನದದಿ ಹರಿಯುವ ಕರುಣಾಕರಿ ಕಾವೇರಿಯ
ನಿಲಯವ ಬೆಳಗಿದ ರಂಗನ ಸಿರಿಮುಡಿಯನು ಕಂಡೆನೇ ॥

ತ್ರಿಭುವನವನು ಸೃಜಿಸಿ ಸಲಹಿ ಮರೆಯಿಪ ದೊರೆ ರಂಗದಲ್ಲಿ
ವಿಭವದಿಂದ ಪವಡಿಸಿ ಭಕ್ತರನು ಪೊರೆವ ವ್ರತದಾತನ
ಶುಭವೀಯುವ ಬಗೆಯು ನಗೆಯು ಮಾಯೆಯಿಂದ ಮಿಳಿರ್ವ ಕಣ್ಣ
ಅಭಯದೃಷ್ಟಿ ಎನ್ನೊಳಗನು ಹರುಷದಿಂದ ತುಂಬಿತೇ ॥

ಕಂಡವೇ ನನ್ನ ಕಣ್ಣು ಆಲದೆಲೆಯ ಮೇಲೆ ಮಲಗಿ
ಅಣ್ಡಾಣ್ಡದ ಬಹಿರಂಡ ಬ್ರಹ್ಮಾಂಡವ ಹೆತ್ತು ಹೊತ್ತು
ಉಣ್ಡ ನನ್ನ ದೇವನನ್ನು ನರುಗುಂಪಿನ ತೋಪುಗಳ ಪ್ರ-
ಚಂಡ ಶೈಲ ವೇಂಕಟದಲಿ ನೆಲಸಿದವನ ಕಂಡವೇ ॥

ಕಾರ್ಮುಗಿಲ ಬಣ್ಣದ, ಗೋಪಾಲನಾಗಿ
ಬೆಣ್ಣೆಯುಂಡ ಬಾಯವನ ಎನ್ನೊಳಗ ಕವರಿದನ
ಜಗದೊಡೆಯ ಚೆಲುವ ರಂಗನ ಎನ್ನ ಅಮುದನ
ಕಂಡ ಕಣ್ಗಳು ಬೇರೆ ಏನನೂ ಕಾಣವೇ ॥

(ಎಂದು ಧಾವಿಸಿ ಮೂರ್ತಿಯ ಬಳಿಗೆ ಓಡುವನು. ಜ್ಯೋತಿಯೊಂದು ಜ್ಯೋತಿಯೊಂದಿಗೆ ಬೆರೆತಂತೆ ಕಾಣುವುದು. ಪಾಣಿ ಬೇರೆಯಾಗಿ ಕಾಣುವುದಿಲ್ಲ.)

ಲೋಕ— ಭಾಗವತರೆಲ್ಲಿ?

ಅರ್ಚಕ— ಮೂರ್ತಿಯಲ್ಲಿ ಲೀನವಾಗಿದಾರೆ.

ಲೋಕ— ತೆರೆಯನ್ನು ಎಳೆ. ಅವರ ಅನುಭವಕ್ಕೆ ನಮ್ಮಿಂದ ಅಡ್ಡಿಯಾಗದಿರಲಿ. ಮಧುರಸ್ವಾಮಿ ನಾವು ಇಂದು ಎಣಿಸಕೂಡದ ಅದ್ಭುತವನ್ನು ನೋಡಿದ್ದಾಯಿತು. ಭಾಗವತಧರ್ಮ ಇಂದು ಪೂರ್ಣವಾಯಿತು.

ಮಧುರ— ನಿಮ್ಮ ತಪಃಪ್ರಭಾವದಿಂದ ಆಯಿತು.

ಲೋಕ— ಪಾಣಿಯವರು ದೇವರಲ್ಲಿ ಆಳಿದರು. ಆದಿಯ ಆಳ್ವಾರುಗಳಂತೆ ನಮ್ಮಾಳ್ವಾರಂತೆ ಇವರೂ ಬ್ರಹ್ಮಸರಸ್ಸಿನ ಪರಮಹಂಸರು. ಇವರನ್ನು ಇನ್ನು ಆಳ್ವಾರೆಂದು ವ್ಯವಹರಿಸಬೇಕು.

ಮಧುರ— ಅದಕ್ಕೇನಡ್ಡಿ, ಆಳ್ವಾರ್ ಸ್ವಾಮಿಗಳೆ?

ಆಳ್ವಾರ್— ಆಹಾ ಅಗತ್ಯವಾಗಿ. ಈ ಅದ್ಭುತ ನಡೆಯುವ ವೇಳೆ ನಾನು ಇಲ್ಲಿ ಇದ್ದು ನಿಮ್ಮೆಲ್ಲರ ಅನುಗ್ರಹದಿಂದ ರಂಗನಾಥನ ಭಕ್ತ ವಾತ್ಸಲ್ಯವನ್ನು ಸ್ವತಃ ಅನುಭವಿಸಿದ್ದು ಒಂದು ದೊಡ್ಡ ಪುಣ್ಯ ವೆಂದು ಭಾವಿಸುತ್ತೇನೆ.

ಲೋಕ— ಈ ವಿಚಾರ ಎಲ್ಲಾ ಗೋಷ್ಠಿಗಳಿಗೂ ತಿಳಿಯುವುದಕ್ಕೆ ಏರ್ಪಾಡು ಮಾಡಬೇಕು. ಮಧುರಸ್ವಾಮಿ ಈ ದಿನವನ್ನು ಈ ಸನ್ನಿಧಿಯಲ್ಲಿ ವೈಕುಂಠದ ಬಾಗಿಲು ತೆಗೆದ ದಿನವೆಂದು ಆಚರಿಸಬೇಕು. ಇಂದೇ ಮೊದಲ ಹಬ್ಬವಾಗಲಿ. ಊರಲ್ಲಿ ಹೆಣ್ಣುಮಕ್ಕಳಿಗೆ ಹೇಳಿ ಕಳು ಹಿಸು. ಆಲಯದಲ್ಲೆಲ್ಲ ರಂಗವಲ್ಲಿಯನ್ನು ಹಚ್ಚಲಿ. ಸಂಜೆಯವರೆಗೆ ಶತವಾರ ಸಹಸ್ರನಾಮಾರ್ಚನೆ ನಡೆಯಲಿ. ಸಂಜೆಯಲ್ಲಿ ದೇವರ ಉತ್ಸವ ನಡೆಯಲಿ. ಜೊತೆಯಲ್ಲಿ ಆಳ್ವಾರುಗಳು ಬಿಜಮಾಡುವಂತೆ ಏರ್ಪಾಡು ಮಾಡು. ತಿರುಪಾಣಿಯಾಳ್ವಾರದು ಸದ್ಯಕ್ಕೆ ಮೃತ್ತಿಕೆ ಯಿಂದ ಒಂದು ಮೂರ್ತಿಯನ್ನು ಮಾಡುತ್ತೇನೆ. ಆ ಮೂರ್ತಿ ಯೂ ಆಳ್ವಾರುಗಳ ಗೋಷ್ಠಿಯಲ್ಲಿ ಬಿಜಮಾಡಿಸಲಿ. ಎಲ್ಲಿ ಅಣ್ಣ ತಿರುಪಾಣಿಯವರ ಭಕ್ತಿಯಿಂದ ದೇವರು ನಮಗೆ ಪ್ರತ್ಯಕ್ಷನಾದ ದಿನವಿದು. ಏಳಿ, ಎಲ್ಲರೂ ಅವರವರ ಕೆಲಸ ನೋಡಿ. ದೊಡ್ಡ ಹಬ್ಬ ಮಾಡಬೇಕು.

ಮಧುರ— ಅಪ್ಪಣೆ.

ಲೋಕ— ಈಗ ರಂಗನಾಥನು ಉಪನಿಷತ್ತನ್ನು ಅವಧರಿಸಲಿ. ಆಳ್ವಾರ ವರೆ, ರಂಭಿಸೋಣವಾಗುತ್ತದೆಯೆ?

ಆಳ್ವಾರ್— ಧನ್ಯ. ಅಗತ್ಯವಾಗಿ (ಎಂದು ಉಪನಿಷತ್ತನ್ನು ಮೊದಲು ಮಾಡು ವನು. ಎಲ್ಲರೂ ಜೊತೆಗೆ ಹೇಳುವರು.)

ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಂ
ವಿಶ್ವಂ ನಾರಾಯಣಂ ದೇವಂ ಅಕ್ಷರಂ ಪರಮಂ ಪ್ರಭುಂ
ವಿಶ್ವತಃ ಪರಮಂ ನಿತ್ಯಂ ವಿಶ್ವಂ ನಾರಾಯಣಂ ಹರಿಂ
ವಿಶ್ವ ಏವೇದಗ್ಂ ಪುರುಷಃ ತದ್ವಿಶ್ವಮುಪಜೀವತಿ

ಪತಿಂ ವಿಶ್ವಸ್ಯಾತ್ಮೇಶ್ವರಂ ಶಾಶ್ವತಗ್‌ಂ ಶಿವಮಚ್ಯುತಂ
ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಂ
ನಾರಾಯಣ ಪರಂಬ್ರಹ್ಮ ತತ್ವಂ ನಾರಾಯಣಃ ಪರಃ
ನಾರಾಯಣ ಪರೋಜ್ಯೋತಿಃ ಆತ್ಮಾ ನಾರಾಯಣಃ ಪರಃ
ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಪಿ ವಾ
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣ ಸ್ಥಿತಃ
ಅನಂತಮವ್ಯಯಂ ಕವಿಂ ಸಮುದ್ರೇಂತಂ ವಿಶ್ವಶಂಭುವಂ
ಪದ್ಮಕೋಶ ಪ್ರತೀಕಾಶಂ ಹೃದಯಂ ಚಾಪ್ಯಧೋಮುಖಂ
ಅಧೋನಿಷ್ಟ್ಯಾ ವಿತಸ್ತ್ಯಾಂತು ನಾಭ್ಯಾಮುಪರಿ ತಿಷ್ಠತಿ
ಹೃದಯಂ ತದ್ವಿಜಾನೀಯಾತ್ ವಿಶ್ವಸ್ಯಾಯತನಂಮಹತ್
ಸಂತತಗ್‌ಂ ಸಿರಾಭಿಸ್ತು ಲಂಬತ್ಯಾಕೋಶಸನ್ನಿಭಂ
ತಸ್ಯಾಂತೇ ಸುಷಿರಂ ಸೂಕ್ಷ್ಮಂ ತಸ್ಮಿಂತ್ಸರ್ವಂ ಪ್ರತಿಷ್ಠಿತಂ
ತಸ್ಯ ಮಧ್ಯೇ ಮಹಾನಗ್ನಿಃ ವಿಶ್ವಾರ್ಚಿಃ ವಿಶ್ವತೋಮುಖಃ
ಸೋಗ್ರಭುಗ್ವಿಭಜನ್ ತಿಷ್ಟನ್ನಾಹಾರಮಜರಃ ಕವಿಃ
ಸಂತಾಪಯತಿ ಸಂದೇಹಂ ಆಪಾದತಲಮಸ್ತಕಂ
ತಸ್ಯ ಮಧ್ಯೇ ವಹ್ನಿಶಿಖಾ ಅಣೀಯೋರ್ಧ್ವಾ ವ್ಯವಸ್ಥಿತಃ
ನೀಲತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ
ನೀವಾರ ಶೂಕವತ್ತನ್ವೀ ಪೀತಾಭಾಸ್ಯಾತ್ತನೂಪಮಾ
ತಸ್ಯಾಶ್ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ
ಸಬ್ರಹ್ಮಸಶಿವಃಸಹರಿಃಸೇಂದ್ರಃಸೋಕ್ಷರಃಪರಮಸ್ವರಾಟ್.

ಸ್ಥಾನ ೮

ಪಾಣಿ ನಿಲ್ಲುತ್ತಿದ್ದ ಸ್ಥಾನದಲ್ಲಿ ತಂಗಿ, ಭಾವ, ಅಳಿಯ, ಅವನ ತಮ್ಮ.

ತಂಗಿ— ಏನೇನೋ ಹೇಳುತಾರೇ ? ಅಣ್ಣಯ್ಯ ಬೇರೆ ಇಲ್ಲಿಲ್ಲ. ಅಯ್ಯೋ ನಮ್ಮಣ್ಣಾ ಏನಾದನೋ ? ಬೆಳಿಗ್ಯೆ ಇಲ್ಲಿ ಇದ್ದನು. ಈಗ ಇಲ್ಲ ಅಂದರೆ ?

ಭಾವ— ಏನಾದನು ಅಣ್ಣ. ಕಾರಿಯಪ್ಪ ಹೇಳಿಕಳುಹಿಸಿರಲಿಲ್ಲೆ. ದೇವ ಸ್ಥಾನಕ್ಕೆ ಕರಕೊಂಡು ಹೋದರು ಅಂತ.

ತಂಗಿ— ಕರಕೊಂಡು ಹೋದರು ಸರಿ. ಬೇಕಾಯಿತು ಕರಕೊಂಡು ಹೋದರು. ತಿರುಗಿ ಬರಲ್ಲ ಅಂದರೆ ?

ಭಾವ— ದೇವರೊಳಗೆ ಅಡಗಿ ಹೋದ ಅಂದರಲ್ಲ. ಇನ್ನದಕ್ಕಿಂತ ಏನು ಬೇಕು ?

ತಂಗಿ— ಏನು ಬೇಕು ! ಆಡು ಬೆಳೆದು ತೋಳನ ಪಾಲಾತು, ಅಣ್ಣ ಬೆಳೆದು ಅತ್ತಿಗೆ ಪಾಲಾದ ಅಂದ ಹಂಗೆ. ನಮ್ಮಣ್ಣ ಅತ್ತಿಗೆ ಪಾಲಾಗಲ್ಲ ಈ ಹಾರೋರ ಪಾಲಾದ. ನಮ್ಮಪ್ಪ–ಅಮ್ಮ ಹತ್ತು ಮಕ್ಕಳ ಹೆತ್ತರು. ಇದ್ದ ಇಬ್ಬರಲ್ಲಿ ಅಣ್ಣಯ್ಯ ಮುಗಿದನೇ !

ಭಾವ— ಆಯಿತು ಬಿಡು. ಪಾಣ್ಯಪ್ಪ ಪುಣ್ಯ ಮಾಡಿದ್ದ.

ತಂಗಿ— ಅಯ್ಯೋ ನಿನ್ನ ಪುಣ್ಯಾ, ಪುಣ್ಯ, ಪುಣ್ಯಾ. (ಎಂದು ಅಳುತ್ತ ಕುಳಿತುಕೊಳ್ಳುವಳು. ಲೋಕಸಾರಂಗನೂ ಕಾರೀದಾಸನೂ ಹೊಳೆಯ ಕಡೆಯಿಂದ ಬರುವರು.)

ಕಾರೀ— ಸ್ವಾಮಿಯವರು ಆಹ್ನಿಕಕ್ಕೆ ಹೊಳೆಗೆ ದಯಮಾಡಿಸಿದ್ದಿರೇನೊ?

ಲೋಕ— ಹೌದು.

ಕಾರೀ— ಈ ದಿನವೇ ಪಾಣಿಯನ್ನು ಆಳ್ವಾರ್ ಪಟ್ಟಕ್ಕೆ ಏರಿಸಿ ಉತ್ಸವ ನಡೆಸೋಣಾಗುತ್ತೆಂದರು.

ಲೋಕ— ಹೌದು. ಊರಲ್ಲಿ ಎಲ್ಲರನ್ನೂ ಬರಹೇಳಿ. ಈ ಉತ್ಸವವನ್ನು ಬಹಳ ವಿಜೃಂಭಣೆಯಿಂದ ನಡೆಯಿಸಬೇಕು.

ಭಾವ— (ಕಾರೀದಾಸನಿಗೆ) ಸ್ವಾಮಿಯೊ, ಕಾರಿಯಪ್ಪನೋರೆ. ಅಡ್ಡ ಬಿದ್ದೆ.

ಕಾರೀ— ದೊಡ್ಡವರಿದಾರಪ್ಪ. ಅವರಿಗೆ ಮೊಕ್ಕು.

ಭಾವ— (ಲೋಕಸಾರಂಗನಿಗೆ) ಬುದ್ಧೀ, ಅಡ್ಡ ಬಿದ್ದೆ.

ಲೋಕ— ದೇವರು ನಿಮಗೆ ಒಳ್ಳೆಯದನ್ನು ಮಾಡಲಿ. ಯಾರಿವರು ?

ಕಾರೀ— ತಾವು ಕಾಣೆರಿ. ಇವರು ತಿರುಪಾಣಿಯ ತಂಗಿ, ಭಾವ, ತಂಗಿಯ ಮಕ್ಕಳು. ಬಹಳ ಒಳ್ಳೆಯ ಜನ.

ಲೋಕ— ಸಂತೋಷ.

ಭಾವ— ಮಾಸ್ವಾಮಿ, ಅಣ್ಣ ಹೋದ ಅಂತ ಈ ನನ್ನ ಹೆಂಡತಿ ಸುಮ್ಮಕೆ ಅಳುತ್ತಾಳೆ. ಇದಕ್ಕೇನಾದರ ಒಸಿ ಧೈರ್ಯ ಹೇಳ್ರ್ಯ.

ಕಾರೀ— ಅಪ್ಪಾ ಧೈರ್ಯ ಹೇಳುವದೇನನ್ನು ? ಯಾರಿಗೆ ದೊರಕಬೇಕು ಈ ಹೋಗುಪಾಡು. ಆಳ್ವಾರ್‌ಗಳ ಜೊತೆಗೆ ಆಳ್ವಾರ್ ಆದರೇ ತಿರುಪಾಣಿಯುವರು. ಇನ್ನು ಮೇಲೆ ಅವರು ಬರೀ ಪಾಣಿಯಲ್ಲ; ತಿರುಪಾಣಿಯಾಳ್ವಾರು. ಸ್ವಾಮಿಗಳ ಭುಜದ ಮೇಲೆ ಕೂತು ದೇವರ ಹತ್ತ್ತಿರ ಹೋದರೇ. ದೇವರ ಜೊತೆಗೆ ಆಳ್ವಾರ್‌ಗಳ ಜೊತೆಗೆ ಸಂಜೆಗೆ ಉತ್ಸವದಲ್ಲಿ ಬರುತ್ತಾರೆಯೇ....

ಅಳಿಯ— ಅಪ್ಪಾಜಿ, ಮಾವಯ್ಯಾ ಸಂಜೆ ಉತ್ಸವಕ್ಕೆ ಬರೋದಾದರೆ ಈ ಕೋಲಾಟ ಆಗ ಆಡಿ ತೋರಿಸಬಹುದಲ್ಲೆ ?

ಭಾವ— ಹೌದು ಮೊಗ. ಎಲೆ ಕೋಲ ಹಾಕಣ್ಣ ಸ್ವಾಮಿಗಳು ನೋಡಲಿ. ಇಲ್ಲಿ ಸ್ವಾಮಿಗಳು, ಅಲ್ಲಿ ದೇವರು. ಆ ದೇವರಾಗೆ ನಮ್ಮ ಪಾಣ್ಯಪ್ಪ. ಹಾಕಲಾ ಕೋಲು: "ಸಖೀ ಬಾರನೇಕೆ ರಂಗಾ" ಹಾಕು. ನಿಮ್ಮವ್ವ ಸ್ವಲ್ಪ ನಗಲಿ.

(ಹುಡುಗರು ಕೋಲು ಹಾಕುವರು)

ಬಾರನೇಕೆ ರಂಗ ಸಖೀ
ಬಾರನೇಕೆ ನನ್ನ ಮೋಹನಾಂಗ ॥
ಬರುತಿಹನೇ ರಾಧಾ, ಕೃಷ್ಣ
ಬರುತಿಹನೇ ಬಿಡು ಮನದ ವಿಷಾದಾ ॥

ಬಾರದಿರಲು ನಲ್ಲಾ ನಾ
ಸೊರಗುವೆನೆಂಬುದನವನೇ ಬಲ್ಲಾ
ಅರಿತೂ ಬರಲಿಲ್ಲಾ ಎನ್ನನು
ಕೃಷ್ಣನೇಕೆ ಒಲ್ಲಾ ॥

ಬರುತಿಹನೇ ರಾಧಾ, ಕೃಷ್ಣ
ಬರುತಿರುವನು ಕೇಳೇ ಯಶೋದಾ
ನಂದನ ನಿನ್ನೊಳಗಿಲ್ಲ ವಿರೋಧಾ
ಬಂದನು ನೋಡೇ ಮಾಣು ವಿಷಾದಾ ॥

ಸಖಿ ನೀನೇ ಬಲ್ಲೆ ಅವನಿಲ್ಲದೆ
ತೃಣ ಸುಖ ನಾನೊಲ್ಲೆ
ಜಾಜಿಮಲ್ಲಿಗೆ ಮೊಲ್ಲೆ ಅವನಿಲ್ಲದೆ
ಎನಗಿವು ಹೂವಲ್ಲೇ
ಬೆಳುದಿಂಗಳಿನಲ್ಲೇ ಈ ಮೆಯ್
ಸುಡುತಲಿರುವುದಲ್ಲೇ
ಸಖಿ ಇದನವನೂ ಅರಿತಿಹನಲ್ಲೇ
ಕೃಷ್ಣನ ಮನಸ್ಸಿನ್ನೆಷ್ಟು ಕಲ್ಲೇ ॥

ಪ್ರಿಯೆಯ ಮನದ ನೋವಾ ಹರಿ
ನೋಡಿ ನೊಂದ ದೇವಾ
ಬೆಳುದಿಂಗಳು ಹೂವಾ ಪೊರೆವಂತೆ
ಕರುಣೆಯಾ ಸ್ವಭಾವಾ

ಪ್ರಿಯೆಯಾತ್ಮದ ಕಾವಾ ತಂಪಿಸೆ
ಉಳಿಸುತವಳ ಜೀವಾ
ಸಖಿಯ ವೇಷವನು ತೊರೆಯುತ ದೇವಾ
ಪ್ರಿಯೆಗೆಸಗಿದನು ಪ್ರೇಮ ಸೇವಾ ॥

ರಂಗ ನಿನ್ನ ಆ ಪ್ರೇಮದ ರಾಣಿ
ರಾಧೆಯು ಪಾಡನು ಹಾಡಿದೆ ಪಾಣಿ
ಅವಳಂದಿನಗತಿ ಇಂದೆನ್ನಾಣೆ
ಎನಗೆ ಒದಗಿತೋ ಭೇದವ ಕಾಣೆ ॥

ಬಾರೋ ಬೇಗ ರಂಗಾ ಬಾ
ಬೇಗ ಮಂಗಳಾಂಗ
ಬಂದು ಬೇಗದಲಿ ಹೇ ವಿಹಂಗ ತು-
ರಂಗ ಪರಿಹರಿಸು ಈ ಭವಭಂಗ ॥

ಲೋಕ— ರಂಗನಾಥನು ತನ್ನ ಭಕ್ತನ ಮೊರೆಯನ್ನು ಕೇಳಿದನು. ಕೃಷ್ಣನು ರಾಧೆಯನ್ನು ಕರೆದು ಅಪ್ಪಿಕೊಂಡನು. ಅಣ್ಣಾ, ಸಂಜೆ ಉತ್ಸವದ ವೇಳೆ ಬಂದು ನಿಮ್ಮ ಮಾವನ ಮುಂದೆ ಈ ಆಟವನ್ನು ಆಡಿ. ಜನರು ನೋಡಲಿ, ಕೇಳಲಿ. ತಿರುಪಾಣಿಯವರ ಮಹಿಮೆ ಅವರಿಗೆ ಇನ್ನಷ್ಟು ತಿಳಿಯಲಿ.

ಭಾವ— ಅಪ್ಪಣೆ. ಬಾ ಹೃದ – ಮಂಗಳ ಹಾಡೊ

ಅಳಿಯ — (ಕುಣಿಯುತ್ತ ಹಾಡುವನು)

ಜಯ ಗೋವಿಂದ ಜಯ ಗೋವಿಂದ ॥
ಜಯ ಸಿರಿ ರಂಗ ಅಸುರಕುಲಭಂಗ
ಜಯ ಮಂಗಳಾಂಗ ಕರುಣಾಪಾಂಗ

(ಹೀಗೆ ಆ ಹಾಡನ್ನು ಕೊನೆಯತನಕ ಹಾಡಿ ಕುಣಿಯುವರು)

ಸಾಧನ
ಮುದ್ರಣಾಲಯ
ಧಾರವಾಡ